# ಅನಂತಪಥ

ANANTHKUMAR PRATISHTHANA

ರಾಜಕಾರಣದ ಯಶಸ್ವಿಗೊಂದು ಮಾದರಿ


ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-3

ಶ್ರೀ ರಾಮಚಂದ್ರ ಗೌಡ





ಸಂಪುಟ-1 | ಮೇ - 2021 | ಸಂಚಿಕೆ - 11

# ವಿಮಾನಯಾನಕ್ಕೊಂದು ನವೀನ ಆಯಾಮ

ಮಾರ್ಚ್ ೧೯, ೧೯೯೮. ಅನಂತಕುಮಾರರ ಜೀವನದಲ್ಲಿ ಒಂದು ಸ್ಮರಣೀಯ ದಿನ. ಅಂದು ಅವರು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದ ಕೇಂದ್ರ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಮಾತ್ರವಲ್ಲ, ಸಂಪುಟದಲ್ಲಿದ್ದ ಅತಿ ಚಿಕ್ಕ ವಯಸ್ಸಿನ ಸಚಿವರೂ ಅವರೇ.

ಆ ದಿನ ಸಂಜೆ ಪ್ರಧಾನಿಯವರನ್ನು ಅಭಿನಂದಿಸುವ ಸಲುವಾಗಿ ಅವರ ಮನೆಗೆ ಹೋದ ಅನಂತಕುಮಾರರನ್ನು ವಾಜಪೇಯಿಯವರು "ನಿನಗೆ ಯಾವ ಖಾತೆ ಬೇಕು?" ಎಂದು ಕೇಳಿದರು. ತಮಗೆ ಗ್ರಾಮೀಣ ಅಭಿವೃದ್ಧಿ ಖಾತೆಯನ್ನೋ ಕೃಷಿ ಖಾತೆಯನ್ನೋ ಕೊಡಬೇಕೆಂದು ಅನಂತಕುಮಾರ್ ಮನವಿಮಾಡಿಕೊಂಡರು. ಅದಕ್ಕೆ ಪ್ರತಿಕ್ರಿಯೆ ತೋರದ ಪ್ರಧಾನಿಯವರು ತಮ್ಮ ಮೇಜಿನ ಕಡೆಗೆ ಕಣ್ಣು ಹೊರಳಿಸಿದರು. ಅಲ್ಲಿ ಇದ್ದ ವಿಮಾನದ ಪುಟ್ಟ ಪ್ರತಿಕೃತಿಯೊಂದನ್ನು ಎತ್ತಿಕೊಂಡು ಅನಂತಕುಮಾರರ ಕೈಗಿರಿಸಿ "ಅಬ್ ಜಾವೋ" ಎಂದರಂತೆ! ಏನೂ ಹೇಳಲು ತೋಚದೆ ಅನಂತಕುಮಾರ್ ಮನೆಗೆ ಹಿಂತಿರುಗಿ ಬರುತ್ತಿದ್ದಂತೆ ದೂರದರ್ಶನದಲ್ಲಿ ವಾರ್ತೆ ಬಿತ್ತರಗೊಳ್ಳುತ್ತಿತ್ತು. ಅದರಲ್ಲಿ " ಶ್ರೀ ಅನಂತಕುಮಾರರಿಗೆ ನಾಗರಿಕ ವಿಮಾನಯಾನ ಖಾತೆಯನ್ನು ವಹಿಸಿಕೊಡಲಾಗಿದೆ" ಎಂಬ ಸುದ್ದಿಯೂ ಪ್ರಸಾರವಾಯಿತು.

### ಬಿಳಿಯಾನೆ ಸಾಕುವ ಕೆಲಸ

ಆಗಿನ ಭಾರತದ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಸಾವಿರಾರು ಕೋಟಿಗಳಷ್ಟು ನಷ್ಟದ ಭಾರಹೊತ್ತ ಬಿಳಿಯಾನೆಗಳಲ್ಲಿ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್ ಲೈನ್ಸ್ ಮೊದಲ ಸ್ಥಾನದಲ್ಲಿದ್ದವು. ಇಂತಹ ಬಿಳಿಯಾನೆಯನ್ನು ಸಾಕುವ ಕೆಲಸವನ್ನು ವಹಿಸಿಕೊಳ್ಳಲು ಯಾರಾದರೂ ಹಿಂಜರಿಯುವುದು ಸಹಜವೇ . ಆದರೆ ಯುವಕ ಅನಂತಕುಮಾರರ ಪಾಲಿಗೆ ಬಂದದ್ದು ಇವೇ ಬಿಳಿಯಾನೆಗಳನ್ನು ಸಾಕುತ್ತಿದ್ದ ನಾಗರಿಕ ವಿಮಾನಯಾನ ಖಾತೆ. 'ಸವಾಲುಗಳು ಹೊಸ ಅವಕಾಶಗಳ ಬಾಗಿಲುಗಳನ್ನೂ ತೆರೆಯುತ್ತವೆ' ಎಂಬ ದೃಢ ನಂಬಿಕೆ, ಧೈರ್ಯಗಳಿಂದ ಅನಂತಕುಮಾರರು ಆ ಖಾತೆಯನ್ನು ನಿರ್ವಹಿಸಲು ಮುಂದಾದರು.

ತೊಂಭತ್ತರ ದಶಕದಲ್ಲಿ ಪ್ರಾರಂಭವಾದ ಉದಾರೀಕರಣ ಪ್ರಕ್ರಿಯೆಯಿಂದಾಗಿ ಅನೇಕ ವಿದೇಶೀ ಕಂಪೆನಿಗಳು ಭಾರತದಲ್ಲಿ ಬಂಡವಾಳ ಹೂಡತೊಡಗಿದ್ದವು. ಅನೇಕ ಭಾರತೀಯ ಉದ್ದಿಮೆಗಳು ತಮ್ಮ ಹೆಜ್ಜೆಗುರುತುಗಳನ್ನು ವಿದೇಶಗಳಲ್ಲಿ ಮೂಡಿಸತೊಡಗಿದ್ದವು. ವಿಶ್ವರಂಗದಲ್ಲಿ ಭಾರತೀಯರಿಗೆ ಅನೇಕ ಉದ್ಯೋಗಾವಕಾಶಗಳು ತೆರೆದುಕೊಂಡವು. ಹೀಗಾಗಿ ವಿಮಾನ ಯಾನ ಕ್ಷೇತ್ರದಲ್ಲಿ ಹಿಂದೆಂದೂ ಕಾಣದಿದ್ದಂತಹ ಸಂಚಲನ ಪ್ರಾರಂಭವಾಗಿತ್ತು. ಆದರೆ ಈ ಸಂಚಲನಕ್ಕೆ ಸರಿಯಾದ ಪ್ರತಿಸ್ಪಂದನೆ ಸರಕಾರದಿಂದ ದೊರೆತಿರಲಿಲ್ಲ. ಹೀಗಾಗಿ ವಿಮಾನ ನಿಲ್ದಾಣಗಳು ಅವ್ಯವಸ್ಥೆಯ ಆಗರಗಳಾಗಿದ್ದವು.

### ಸಮರ್ಪಕ ಉಪಕ್ರಮ

ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿ, ಅಲ್ಲಿನ ಅವಕಾಶಗಳು, ಅದರ ಸಮಸ್ಯೆಗಳು ಮತ್ತು ತಮಗೆ ಲಭ್ಯವಿರುವ ಸಂಪನ್ಮೂಲಗಳು ಎಲ್ಲವನ್ನೂ ಅಧ್ಯಯನ ಮಾಡಿಕೊಂಡು ಕಾರ್ಯೋನ್ಮುಖರಾಗುವುದು ಉತ್ತಮ ನೇತೃತ್ವದ ಲಕ್ಷಣ. ಮಂತ್ರಿಮಂಡಲದಲ್ಲಿ ತಮಗೆ ದೊರೆತ ಮೊದಲ ಅವಕಾಶದಲ್ಲಿಯೇ ಶ್ರೀ ಅನಂತಕುಮಾರರು ಈ ಲಕ್ಷಣಗಳನ್ನು ಪ್ರಕಟಪಡಿಸಿದರು. ಪ್ರಮಾಣವಚನವನ್ನು ಸ್ವೀಕರಿಸಿದ ಮರುಗಳಿಗೆಯಲ್ಲಿಯೇ ಅನಂತಕುಮಾರರು ಇಲಾಖೆಯ ಹಿರಿಯ ಅಧಿಕಾರಿಗಳ ಸಭೆ ಕರೆದು ಇಲಾಖೆಯ ಸ್ಥಿತಿಗತಿಗಳ ಬಗ್ಗೆ ಸಮಾಲೋಚನೆ ಮಾಡಿದರು. ತಮ್ಮ ಖಾತೆಯ ಮುನ್ನೋಟ ಹೇಗಿರಬೇಕು ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆಯನ್ನು ಮೂಡಿಸಿಕೊಂಡರು. ವಿಮಾನಯಾನ ಮತ್ತು ವಿಮಾನ ನಿಲ್ದಾಣಗಳ ವ್ಯವಸ್ಥೆ ಹಾಗೂ ನಿರ್ವಹಣೆಗಳ ವಸ್ತುಸ್ಥಿತಿಯನ್ನು ಪರಿಚಯಮಾಡಿಕೊಂಡರು. ಅದಾದ ಸ್ವಲ್ಪ ಹೊತ್ತಿನಲ್ಲೇ ನಡೆದ ಪತ್ರಿಕಾಗೋಷ್ಠಿಯಲ್ಲಿ ತಮ್ಮ ಖಾತೆಯ ನಿರ್ವಹಣೆ, ಸವಾಲು ಮತ್ತು ಭವಿಷ್ಯದ ಪರಿಕಲ್ಪನೆಗಳ ಬಗೆಗೆ ನಿರರ್ಗಳವಾಗಿ ಮಾತನಾಡಿದ ಸಚಿವರ ಆತ್ಮವಿಶ್ವಾಸ, ಮೇಲ್ಮಟ್ಟದ ಗ್ರಹಿಕೆಗಳು ಅಧಿಕಾರಿಗಳಿಗೂ ಬೆರಗುಮೂಡಿಸುವಂತಿದ್ದವು.

ವಿಮಾನಯಾನ ಖಾತೆ ಎಂದೊಡನೆ ನಮಗೆ ನೆನಪಾಗುವುದು ಏರ್ ಇಂಡಿಯಾ ಮತ್ತು ಇಂಡಿಯನ್ (ಏರ್ ಲೈನ್ಸ್) ಕಂಪೆನಿಗಳು ಮಾತ್ರ. ಆದರೆ ಖಾತೆಯ ಅಡಿಯಲ್ಲಿ ದೇಶದ ಉದ್ದಗಲಕ್ಕೂ ವ್ಯಾಪಿಸಿರುವ 125ವಿಮಾನ ನಿಲ್ದಾಣಗಳ ನಿರ್ವಹಣೆಯೂ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತವೆ. ತಮಗೆ ವಹಿಸಲಾದ ಖಾತೆಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲ ವಿಮಾನ ನಿಲ್ದಾಣಗಳನ್ನು ಭೇಟಿ ಮಾಡಿ ಅಲ್ಲಿನ ಸ್ಥಿತಿಗತಿಗಳ ಪರಿಚಯವನ್ನು ಪಡೆದುಕೊಳ್ಳುವುದು ಅವಶ್ಯಕವಾಗಿತ್ತು. ಲಡಾಕಿನಿಂದ ಕೇರಳದವರೆಗೆ ಮುಂಬಯಿಯಿಂದ ಅಸ್ಸಾಮಿನ ವರೆಗೆ (ಅಂದು) ವ್ಯಾಪಿಸಿಕೊಂಡಿದ್ದ 120 ವಿಮಾನ ನಿಲ್ದಾಣಗಳನ್ನು ಪರಿಶೀಲಿಸುವ ಕಷ್ಟದ ಕೆಲಸವನ್ನು ಕೇವಲ ಎರಡೇ ತಿಂಗಳಲ್ಲಿ ಶ್ರೀ ಅನಂತಕುಮಾರರು ಅದಮ್ಯ ಹುಮ್ಮಸ್ಸಿನಿಂದ ಮುಗಿಸಿದರು. ತಮ್ಮ ಈ ಭೇಟಿಗಳ ಸಂದರ್ಭದಲ್ಲಿ ಎಲ್ಲ ವಿಮಾನ ನಿಲ್ದಾಣಗಳ ಕುಂದು ಕೊರತೆಗಳನ್ನು ಸಾಕ್ಷಾತ್ ಅನುಭವಕ್ಕೆ ತಂದು ಕೊಂಡರು. ಜೊತೆಗೆ ವಿಮಾನಯಾನ ಕಂಪೆನಿಗಳ ಅಗತ್ಯಗಳನ್ನೂ ಅರಿತುಕೊಂಡರು. ಅನೇಕ ಪೈಲಟ್ ಗಳನ್ನು ನೇರವಾಗಿ ಮಾತನಾಡಿಸಿ ವಿಮಾನ ನಿಲ್ದಾಣಗಳ ಸಮಸ್ಯೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದರು.




### ಆದ್ಯತೆಯ ಕೆಲಸ

ಮೊದಲಿಗೆ ವಿಮಾನ ನಿಲ್ದಾಣಗಳ ಮೂಲಸೌಕರ್ಯಗಳ ಕಡೆಗೆ ತಮ್ಮ ಗಮನವನ್ನು ಹರಿಸಿದ ಅನಂತಕುಮಾರರು ಎಲ್ಲ ಪ್ರಮುಖ ವಿಮಾನನಿಲ್ದಾಣಗಳನ್ನು ಆಧುನಿಕ ಮಟ್ಟಕ್ಕೆ ನವೀಕರಣಗೊಳಿಸಿದರು. ಅನೇಕ ವಿಮಾನನಿಲ್ದಾಣಗಳ ರನ್ ವೇಗಳನ್ನು ವಿಸ್ತರಿಸಿದರು. ಎಲ್ಲ ನಿಲ್ದಾಣಗಳಲ್ಲಿ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ತೆಗೆದುಕೊಂಡರು.

ಇವೆಲ್ಲಕ್ಕಿಂತ ಹೆಚ್ಚಾಗಿ ಸರಕಾರೀ ಒಡೆತನದ ವಿಮಾನಯಾನ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅನೇಕ ಕ್ರಮಗಳನ್ನು ತೆಗೆದುಕೊಂಡರು. ವಿಮಾನಗಳ ಸುಸ್ಥಿತಿ, ಹಾರಾಟದ ಸಮಯಪಾಲನೆ, ಅನಗತ್ಯ ಸಿಬ್ಬಂದಿಗಳ ಕಡಿತ, ಅನವಶ್ಯಕ ವೆಚ್ಚಗಳನ್ನು ತಡೆಯುವುದು ಮುಂತಾದ ಅನೇಕ ಕ್ರಮಗಳ ಮೂಲಕ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದರು. ತತ್ಪೂರ್ವದಲ್ಲಿ 1991 ರಿಂದ 1997 ರ ವರೆಗೆ ಎಂಟು ವರ್ಷಗಳ ಕಾಲ ಸತತವಾಗಿ ನಷ್ಟವನ್ನು ಅನುಭವಿಸುತ್ತಿದ್ದ ಇಂಡಿಯನ್ ಏರ್ ಲೈನ್ಸ್ ಸಂಸ್ಥೆ ಮೊತ್ತಮೊದಲ ಬಾರಿಗೆ 1998 ರಲ್ಲಿ 45 ಕೋಟಿ ರೂಪಾಯಿಗಳ ಲಾಭವನ್ನು ಗಳಿಸಿತು. ಇದು 1999 ರಲ್ಲಿ 199.81 ಕೋಟಿರೂಪಾಯಿಗಳಿಗೇರಿತು. 1998 ರಿಂದ 2000ನೇ ಇಸವಿಗಳ


ಪುಟ 4 ರಲ್ಲಿ ಮುಂದುವರೆದಿದೆ



ಸಾಮಾಜಿಕ ಸೇವೆ : ಒಂದು ಪಾರಂಪರಿಕ ಮೌಲ್ಯ
ಡಾ. ತೇಜಸ್ವಿನಿ ಅನಂತಕುಮಾರ್
ಪುಟ - 3

ಆತ್ಮನಿರ್ಭರ ಭಾರತ : 5G ತಂತ್ರಜ್ಞಾನದ ಅವಕಾಶಗಳು
ಪ್ರೊ. ಅಭಯ ಕರಂದಿಕರ
ಪುಟ - 5


ನಾನು ಕಂಡ ಬಾಲಕ ಅನಂತ್
ಮೋಹನ ರಾಜ್ ಸಾತುವಳ್ಳಿ
ಪುಟ - 7

"ಅನಂತ ಚೇತನ" – ಸಾರ್ಥಕ ಬದುಕಿನ ಐತಿಹಾಸಿಕ ದಾಖಲೆ
ಕೆ. ಜನಾರ್ದನ ತುಂಗ
ಪುಟ - 9

# ರಾಜಕಾರಣದ ಯಶಸ್ಸಿಗೊಂದು ಮಾದರಿ

ಶ್ರೀ ರಾಮಚಂದ್ರ ಗೌಡ
ಹಿರಿಯ ಮುಖಂಡರು, ಭಾರತೀಯ ಜನತಾ ಪಕ್ಷ

ನಾನು ಕಂಡಂತೆ



ಅನಂತಕುಮಾರ್

ಅನಂತಪಥದ ೧೦ನೇ ಸಂಚಿಕೆಯನ್ನು ಬಿಡುಗಡೆ ಮಾಡಬೇಕು ಎಂದು ಅನಂತಕುಮಾರ್ ಪ್ರತಿಷ್ಠಾನದವರು ನನ್ನನ್ನು ಕೇಳಿಕೊಂಡಿದ್ದಾರೆ. ಇದು ನನಗೆ ಬಹಳ ಸಂತೋಷ. ಅನಂತಪಥ ಅಂದರೆ infinite routes, unlimited roots. ಶ್ರೀ ಅನಂತಕುಮಾರ್ ಅವರಿಗೆ ಜೀವನದಲ್ಲಿ ಎದುರಾಗಿ ಬಂದಂತಹ ಪಥಗಳು ಅನಂತವಾದವು, ವರ್ಣನೆ ಮಾಡಲಾರದಷ್ಟು ಪಥಗಳು. ಆ ಹಾದಿಗಳಲ್ಲಿ ಅವರು ಕ್ರಮಿಸಿದ ಬಗೆ, ಸಾಧಿಸಿದ ಯಶಸ್ಸು ಮಹತ್ವದ್ದು.

ನನಗೆ ಅನಂತಕುಮಾರ್ ಮೊದಲು ಪರಿಚಯವಾಗಿದ್ದು ಅವರು ಬಿ.ಜೆ.ಪಿ ಗೆ ಬಂದಾಗ. ಅದಕ್ಕೆ ಮೊದಲು ನನಗೆ ಅವರ ಪರಿಚಯ ಇರಲಿಲ್ಲ. ಒಮ್ಮೆ ಶ್ರೀ ಹೊ. ವೆ. ಶೇಷಾದ್ರಿಯವರನ್ನು ಭೇಟಿ ಮಾಡಿದಾಗ ಅವರು " ಗೌಡರೇ, ನಿಮ್ಮಕಡೆಗೆ ಒಬ್ಬ ನವಯುವಕನನ್ನು ಕಳುಹಿಸುತ್ತ ಇದ್ದೇನೆ. ಅವರನ್ನು ರಾಜಕೀಯ ಕ್ಷೇತ್ರದಲ್ಲಿ ಮೇಲೆ ಬರುವುದಕ್ಕೆ ನಿಮ್ಮ ಪ್ರಯತ್ನ, ಸಹಾಯ ಮಾಡಿ" ಎಂದರು. ಅವರು ಹೇಳಿದ ನವಯುವಕನೇ ಅನಂತಕುಮಾರ್. ಅಲ್ಲಿಯವರೆಗೂ ಅವರು ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರೆಂದು ಆಗ ನನಗೆ ಗೊತ್ತಾಯಿತು. ನಾನು ೧೯೬೨ರಲ್ಲೇ ದಾವಣಗೆರೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ವಿದ್ಯಾರ್ಥಿ ಪರಿಷತ್ತಿನ ನಾಯಕನಾಗಿ ಕೆಲಸ ಮಾಡುತ್ತ ಇದ್ದೆ. ಇಂಜಿನಿಯರಿಂಗ್ ವ್ಯಾಸಂಗ ಮುಗಿದಮೇಲೆ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಿಂದ ದೂರವಾಗಿದ್ದೆ. ಬೆಂಗಳೂರಿಗೆ ಬಂದ ಮೇಲೆ ನನ್ನನ್ನು ಶ್ರೀ ರಾಮಾ ಜೋಯಿಸರು ಜನಸಂಘಕ್ಕೆ ಕರೆದುಕೊಂಡು ಹೋದರು. ಜನಸಂಘ ಮುಂದೆ ಬಿ. ಜೆ. ಪಿ ಆದಮೇಲೆ ಶ್ರೀ ಯಡಿಯೂರಪ್ಪನವರು ಅಧ್ಯಕ್ಷರಾಗಿದ್ದಾಗ ಶ್ರೀ ಅನಂತಕುಮಾರ್ ಅವರನ್ನು ಶ್ರೀ ಹೊ. ವೆ. ಶೇಷಾದ್ರಿಯವರು ಸಂಘದ ಪ್ರತಿನಿಧಿಯಾಗಿ ನಮ್ಮ ಜೊತೆಗೆ ಕಳುಹಿಸಿದರು. ಅವರನ್ನು ಕಂಡ ಮೊದಲನೇ ನೋಟದಲ್ಲೇ ಅವರು ಒಬ್ಬ ರಾಷ್ಟ್ರ ನಾಯಕರಾಗುತ್ತಾರೆ ಅನ್ನುವಂಥ ಅಭಿಪ್ರಾಯ ನನಗೆ ಬಂತು.

ರಾಷ್ಟ್ರ ನಾಯಕರಾಗಲು ಎಲ್ಲ ಅರ್ಹತೆಯೂ ಇದ್ದ ಅವರಿಗೆ ಅನೇಕ ಬಾರಿ ನಾನು ಹೇಳಿದ್ದೆ you are imperial material, be careful, be correct ಆದರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳದವರಂತೆ ಅವರು ತಮಾಷೆ ಮಾಡುತ್ತಲೇ



ಇರುತ್ತಿದ್ದರು. your capacity is that much, carry on ಎಂದು ನಾನು ಹೇಳುತ್ತಿದ್ದೆ

ಅನಂತಕುಮಾರ್ ಅವರು ಬಿ.ಜೆ.ಪಿಗೆ ಬಂದ ಹೊಸತರಲ್ಲಿ ಅವರನ್ನು ಯುವ ಮೋರ್ಚಾ ಅಧ್ಯಕ್ಷರಾಗುವಂತೆ ಕೇಳಲಾಯಿತು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದು ಕೆಲಸ ಮಾಡುವುದಾಗಿ ಹೇಳಿದರು. ಅದಕ್ಕೆ ಸಮ್ಮತಿಸಿದ ಶ್ರೀ ಹೊ. ವೆ. ಶೇಷಾದ್ರಿಯವರು ನಮ್ಮ ನಾಯಕರನ್ನು ಮತ್ತೊಮ್ಮೆ ಸಂಪರ್ಕ ಮಾಡಿ ಅನಂತಕುಮಾರ್ ಅವರನ್ನು ಕರ್ನಾಟಕ ರಾಜ್ಯದ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದರು. ಹೀಗೆ ಅನಂತಕುಮಾರ್ ಇಲ್ಲಿಗೆ ಬಂದಮೇಲೆ ೧೯೮೮ರಲ್ಲಿ ವಿಧಾನ ಪರಿಷತ್ತಿನ ಚುನಾವಣೆಯೊಂದು ನಡೆಯಿತು. ಆಗ ಇಡೀ ರಾಜ್ಯದಲ್ಲಿ ಪಕ್ಷದಿಂದ ಗೆದ್ದವರು ಮೂರೇ ಜನ - ನಾನು, ಶ್ರೀ ಶಂಕರಮೂರ್ತಿ, ಮತ್ತೊಬ್ಬರು ಡಾಕ್ಟರ್ ತಂಗಾ. ಆಗ ರಾಜ್ಯದ ಮಾತು ಹಾಗಿರಲಿ, ಇಡೀ ದೇಶದಲ್ಲಿ ಭಾರತೀಯ ಜನತಾ ಪಾರ್ಟಿ ನೆಲಕಚ್ಚಿತ್ತು. ಶ್ರೀ ವಾಜಪೇಯಿ, ಶ್ರೀ ಅಡ್ವಾನಿಯವರಿಂದ ಮೊದಲುಗೊಂಡು ಎಲ್ಲರೂ ಚುನಾವಣೆಯಲ್ಲಿ ಸೋತಿದ್ದರು. ಅಂತಹ ವೈಪರೀತ್ಯವಿದ್ದ ಸಂಧರ್ಭದಲ್ಲಿ ಶ್ರೀ ಅನಂತಕುಮಾರ್ ಅವರ ಚೈತನ್ಯ, ಚಟುವಟಿಕೆ, ಕಾರ್ಯಶುದ್ಧಿಗಳ ಫಲವಾಗಿ ನಾವು ಮೂರು ಜನ ಕರ್ನಾಟಕ ರಾಜ್ಯದಲ್ಲಿ ಗೆಲ್ಲಲು ಸಾಧ್ಯವಾದದ್ದು ಒಂದು ಅಪೂರ್ವ ಸಾಧನೆಯೇ ಸರಿ.

ನಾನು ಸ್ಪರ್ಧಿಸಿದ ಕ್ಷೇತ್ರದಿಂದ ನನ್ನ ಹೆಸರಿನವರೇ ಇನ್ನೊಬ್ಬ ರಾಮಚಂದ್ರ ಗೌಡರನ್ನು ವಿರೋಧಿಗಳು ಅಭ್ಯರ್ಥಿಯಾಗಿ ನಿಲ್ಲಿಸಿದ್ದರು. ಈ ಗೊಂದಲದಿಂದ ನನಗೆ ಸಿಗುವ ಮತಗಳು ಕಡಿಮೆಯಾಗಲಿ ಎಂಬ ಹುನ್ನಾರದಿಂದ ಹೀಗೆ ನಿಲ್ಲಿಸಿದ್ದ ಇನ್ನೊಬ್ಬ ಅಭ್ಯರ್ಥಿ ಡಾಕ್ಟರ್ ಸಿ. ರಾಮಚಂದ್ರ ಗೌಡ ಎಂದಿತ್ತು. ಆಗ ಅನಂತಕುಮಾರ್ ಅವರು, ಇನಿಷಿಯಲ್ ಇಲ್ಲದ ಡಾಕ್ಟರ್ ಅಲ್ಲದ ಶ್ರೀ ರಾಮಚಂದ್ರ ಗೌಡರಿಗೆ ಓಟು ಕೊಡಿ ಅಂತ ಪ್ರಚಾರ ಮಾಡತೊಡಗಿದರು. ಈ ಮೂಲಕ ನನ್ನನ್ನು ಚುನಾವಣೆಯಲ್ಲಿ ಗೆಲ್ಲಿಸುವುದಕ್ಕೆ ಏನೇನು ಪರಿಶ್ರಮ ಹಾಕಬೇಕೋ ಅಷ್ಟೆಲ್ಲ ಪ್ರಯತ್ನಪಟ್ಟು ಓಡಾಡಿದರು. ಈ ಪರಿಶ್ರಮದ ಫಲವಾಗಿ ನಾನು ಎಮ್.ಎಲ್.ಸಿ ಯಾದೆ.

ಶ್ರೀ ಅನಂತಕುಮಾರ್ ಅವರು ಆಗ ಬಿ.ಜೆ.ಪಿ ಆಫೀಸಿನಲ್ಲಿ ಇದ್ದರು. ಆ ಕಾಲದಲ್ಲಿ ಅವರಿಗೆ ಉಳಿದುಕೊಳ್ಳುವುದಕ್ಕೆ ಜಾಗ ಇರಲಿಲ್ಲ. ಎಂ.ಎಲ್.ಸಿ.ಯಾಗಿದ್ದ ನನಗೆ ಶಾಸಕರ ಭವನದಲ್ಲಿ ಕೊಟ್ಟಿದ್ದ ಒಂದು ಕೊಠಡಿಯನ್ನು ನಾನು ಅವರಿಗೆ ಬಿಟ್ಟುಕೊಟ್ಟೆ. ಅದೇ ಸಂದರ್ಭದಲ್ಲಿ ಮಾಜಿ ಶಾಸಕರಾಗಿದ್ದ ಶ್ರೀ ಕರಂಬಳ್ಳಿ ಸಂಜೀವಶೆಟ್ಟರು ಚುನಾವಣೆಯಲ್ಲಿ ಸೋತಿದ್ದರು. ಅವರಿಗೂ ರೂಮು ಬೇಕಾಗಿತ್ತು. ನಾನು ಬಿಟ್ಟುಕೊಟ್ಟಿದ್ದ ಕೊಠಡಿಯಲ್ಲೇ ಇಬ್ಬರೂ ಇದ್ದರು.

ಅನಂತಕುಮಾರ್ ಅವರಿಗೆ ರಾಜಕಾರಣದಲ್ಲಿ ಅದೇಕೆ ಬೇಸರ ಬಂದಿತೋ ಗೊತ್ತಿಲ್ಲ. ಕೊನೆಗೆ ಅವರು ಒಂದು ಕರಿಕೋಟು ಹಾಕಿಕೊಂಡು ನನಗೆ ರಾಜಕಾರಣ ಆಗೋಲ್ಲ ನಾನು ಲಾಯರ್ ಆಗುತ್ತೇನೆಂದು ಹೊರಟುಬಿಟ್ಟರು. ಶ್ರೀ ಯಡಿಯೂರಪ್ಪನವರೂ ನಾನೂ ಅವರನ್ನು ತಡೆದೆವು. ಅವರನ್ನು ಕರೆದು ಬುದ್ಧಿವಾದ ಹೇಳಿದೆವು. ನೀವು ಕರಿಕೋಟು ಹಾಕುವುದಕ್ಕೆ ಎಂದು ನಾವು ಇಲ್ಲಿ ಕರೆಸಿಲ್ಲ. ಇಲ್ಲಿ ನೀವು ಬಿಳಿ ಜುಬ್ಬ ಹಾಕಿಕೊಳ್ಳಬೇಕು, ಅಷ್ಟೇ ನಿಮ್ಮ ಕೆಲಸ. ಯಾವ ಕಾರಣಕ್ಕೂ ಕರಿಕೋಟು ಹಾಕುವ ಹಾಗೆಯೇ ಇಲ್ಲ ಎಂದು ಹೇಳಿ, ಮೊದಲು ಮದುವೆ ಮಾಡಿಕೊಳ್ಳಿ ಎಂದು ಬೋಧಿಸಿದೆವು. ಮದುವೆ ಮಾಡಿಕೊಳ್ಳದೇ ರಾಜಕಾರಣ ಮಾಡುವುದು ಅದು ಪ್ರಚಾರಕರ ಕೆಲಸ . ನೀವು ರಾಜಕೀಯ ಮಾಡಬೇಕಾದರೆ ಮದುವೆ ಮಾಡಿಕೊಳ್ಳಿರಿ ಅಂತ ಹೇಳಿದೆವು. ಆಗ ಅವರು ಮದುವೆಗೆ ಯೋಚನೆ ಮಾಡಿದರು . ಅವರು ವಿದ್ಯಾರ್ಥಿ ಪರಿಷತ್ತಿನಲ್ಲಿ ಇದ್ದಾಗ ತೇಜಸ್ವಿನಿಯವರ ಪರಿಚಯವಾಗಿತ್ತು. ಅವರೊಡನೆಯೇ ಹುಬ್ಬಳ್ಳಿಯಲ್ಲಿ ಮದುವೆಯೂ ಆಯಿತು.

ಮದುವೆಯಾದ ಮೇಲೆ ಎಲ್ಲಿ ಇರಬೇಕು ಅಂತ ಯೋಚನೆ ಮಾಡಿದರು. ಮಲ್ಲೇಶ್ವರಂ ೯ನೇ ಕ್ರಾಸಿನಲ್ಲಿ ಒಂದು ಮನೆಯಲ್ಲಿ ಬಾಡಿಗೆಗೆ ಇದ್ದರು. ನಾನು ಸ್ವತ: ನೋಡಿದ್ದೀನಿ. ಆ ಮನೆಯಲ್ಲಿ ಸೇದುವ ಬಾವಿ ಇತ್ತು. ಬಾವಿಯಲ್ಲಿ ನೀರು ಸೇದಿ, ಬಟ್ಟೆ ಒಗೆದುಕೊಂಡು ಕೆಲಸ ಮಾಡುತ್ತ ಇದ್ದರು.

ಪುಟ 5 ರಲ್ಲಿ ಮುಂದುವರೆದಿದೆ



ರಾಜಕಾರಣದ ಹಿರಿಯ ಧುರೀಣರಲ್ಲೊಬ್ಬರೂ ಮಾಜಿ ಮಂತ್ರಿಗಳೂ ಆದ ಶ್ರೀ ರಾಮಚಂದ್ರಗೌಡರು ಅನಂತಪಥ ಮಾಸಪತ್ರಿಕೆಯ ಹತ್ತನೆಯ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಪ್ರತಿ ತಿಂಗಳಿನಂತೆ ಏಪ್ರಿಲ್ ತಿಂಗಳ ೨೨ನೇ ತಾರೀಕು ಜರುಗಿದ ಆನ್ ಲೈನ್ ಕಾರ್ಯಕ್ರಮದಲ್ಲಿ ಶ್ರೀ ರಾಮಚಂದ್ರ ಗೌಡರೊಡನೆ ಅವರ ಪುತ್ರ ಶ್ರೀ ಸಪ್ತಗಿರಿ ಗೌಡರೂ ಪಾಲ್ಗೊಂಡು ಪತ್ರಿಕೆಯ ಬಿಡುಗಡೆಯನ್ನು ನೆರವೇರಿಸಿದರು. ಪತ್ರಿಕೆಯ ಸ್ವರೂಪ, ವಿನ್ಯಾಸಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದ ಗೌಡರು ಶ್ರೀ ಅನಂತಕುಮಾರರು ಕರ್ನಾಟಕದಲ್ಲಿ ಪಕ್ಷದ ಯುವನಾಯಕರಾಗಿ ನೇಮಕಗೊಂಡ ದಿನದಿಂದ ಕೇಂದ್ರಸಚಿವರಾಗುವವರೆಗೆ ಬೆಳೆದ ಯಶಸ್ಸಿನ ಹಾದಿಯನ್ನು ವರ್ಣಿಸಿದರು. ಅನಂತಕುಮಾರರೊಡನೆ ತಮ್ಮ ಒಡನಾಟವನ್ನು ಸವಿಸ್ತಾರವಾಗಿ ನೆನಪಿಸಿಕೊಂಡ ರಾಮಚಂದ್ರಗೌಡರು ಅವರು ಸಾಗಿದ ಹಲವು ಕವಲುಗಳ ಅನಂತಪಥ ಇಂದಿನ ಜನಾಂಗಕ್ಕೆ ಮಾರ್ಗದರ್ಶಕವಾಗಲೆಂದು ಆಶಿಸಿದರು. ಅಂದು ಶ್ರೀ ರಾಮಚಂದ್ರಗೌಡರು ಮಾಡಿದ ಭಾಷಣವನ್ನು ಈ ಸಂಚಿಕೆಯಲ್ಲಿ ಸಂಗ್ರಹಿಸಿಕೊಡಲಾಗಿದೆ.




# ಸಾಮಾಜಿಕ ಸೇವೆ : ಒಂದು ಪಾರಂಪರಿಕ ಮೌಲ್ಯ

ಡಾ. ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

ನಾನು ಸಾಮಾಜಿಕ ಕೆಲಸಕ್ಕೆ ತೊಡಗಿಕೊಳ್ಳಲು ಯಾವುದೋ ಒಂದು ಘಟನೆ ಕಾರಣವಾಯಿತು ಅಥವಾ ಯಾವುದೋ ಒಂದು ಕ್ಷಣದಲ್ಲಿ ನಾನು ಹಾಗೆ ನಿರ್ಧರಿಸಿದೆ ಎಂದೇನಿಲ್ಲ. ವೈಯಕ್ತಿಕವಾಗಿ ಶಾಲಾ ದಿನಗಳಿಂದಲೂ ನನ್ನಲ್ಲಿ ಸಾಮಾಜಿಕ ಸೇವಾಭಾವನೆಯ ತುಡಿತವಿತ್ತು. ನಾನು ಗ್ರಾಮೀಣ ಭಾಗದಲ್ಲಿ ಓದಿದವಳು. ನನ್ನ ತಂದೆ ಇಂಜಿನಿಯರ್ ಆಗಿದ್ದರು. ಒಂದು ವಿದ್ಯಾವಂತ ಕುಟುಂಬದ ಹಿನ್ನೆಲೆ ನನ್ನದು. ನಾವು ಓದುತ್ತಿದ್ದ ಗ್ರಾಮೀಣ ಭಾಗದ ಶಾಲೆಗಳಿಗೆ ಮಕ್ಕಳು ಸರಿಯಾಗಿ ಬರುತ್ತಿರಲಿಲ್ಲ. ವಿಶೇಷವಾಗಿ ಹೆಣ್ಣುಮಕ್ಕಳನ್ನಂತೂ ಹನ್ನೆರಡು, ಹದಿಮೂರು ವರ್ಷ ವಯಸ್ಸಾದ ಮೇಲೆ ಶಾಲೆಗೇ ಕಳುಹಿಸುತ್ತಿರಲಿಲ್ಲ. ಆ ಸಂದರ್ಭದಲ್ಲಿ ನಾನು ಶಿಕ್ಷಕರ ಜೊತೆಗೆ ಅಂಥವರ ಮನೆಗಳಿಗೆ ಹೋಗಿ ಅವರನ್ನು ಶಾಲೆಗೆ ಕರೆದುಕೊಂಡು ಬರುತ್ತಿದ್ದೆ. ಊರಿನಲ್ಲಿ ನಮ್ಮ ಶಿಕ್ಷಕರನ್ನು ಮನೆಯೊಳಗೆ ಬರಲು ಬಿಡುತ್ತಿರಲಿಲ್ಲ. ಆಗ "ನೀನು ಹೋಗು, ಅವರ ತಂದೆತಾಯಿಯರನ್ನು ಒಪ್ಪಿಸಿ ಶಾಲೆಗೆ ಬರುವ ಹಾಗೆ ಮಾಡು" ಎಂದು ನಮ್ಮ ಶಿಕ್ಷಕರು ನನಗೆ ಹೇಳುತ್ತಿದ್ದರು. ನನ್ನ ಸಾಮಾಜಿಕ ಸೇವಾಕಾರ್ಯ ಪ್ರಾರಂಭವಾದದ್ದು ಹೀಗೆ.

ನಾನು ನನ್ನ ಶಾಲಾದಿನಗಳಲ್ಲಿ ಅನೇಕ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆ. ಆಗ ಚರ್ಚೆ ಮಾಡಬೇಕಾಗಿರುವ ವಿಷಯಗಳ ಬಗ್ಗೆ ತಿಳಿದುಕೊಳ್ಳಬೇಕಾಯಿತು. ಹೀಗಾಗಿ, ಸಮಾಜದ ಬೇರೆ ಬೇರೆ ಮುಖಗಳ ಪರಿಚಯವಾಗತೊಡಗಿತು. ಮುಂದೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸೇರಿದ ಮೇಲೆ ವಿಶೇಷವಾಗಿ ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರ ಪರಿಚಯದೊಡನೆ ಶೈಕ್ಷಣಿಕ ಕ್ಷೇತ್ರದ ಬೇರೆ ಬೇರೆ ವಿಷಯಗಳ ಪರಿಚಯವಾಯಿತು. ಸಾಮಾಜಿಕವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಹಿರಿಯರ ಜೊತೆಗೆ ಒಡನಾಟ ದೊರೆಯಿತು. ಅಂತಹ ಸಂದರ್ಭಗಳಲ್ಲಿ ಈ ದೇಶ ನಮಗಾಗಿ ಏನೆಲ್ಲ ಕೊಟ್ಟಿದೆ, ನಾವೂ ಈ ದೇಶಕ್ಕಾಗಿ ಏನಾದರೂ ಸೇವೆ ಮಾಡಬೇಕು ಎಂದು ನನಗನ್ನಿಸುತ್ತಿತ್ತು. ವಿದ್ಯಾರ್ಥಿ ಪರಿಷತ್ ಮುಖಾಂತರ ಒಂದಷ್ಟು ಕೆಲಸ ಮಾಡುತ್ತಿದ್ದೆ.

ಮುಂದೆ ಶ್ರೀ ಅನಂತಕುಮಾರ್ ಅವರೊಡನೆ ನನ್ನ ವಿವಾಹವಾಯಿತು. ಆ ಕಾಲಕ್ಕೆ ನನ್ನ ಅತ್ತೆಯವರಾದ ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಕೊಳೆಗೇರಿಯ ಮಕ್ಕಳಿಗಾಗಿ ಶಾಲೆಯೊಂದನ್ನು ನಡೆಸುತ್ತಿದ್ದರು. ಜೊತೆಗೆ ಮಹಿಳೆಯರ ಸಬಲೀಕರಣಕ್ಕಾಗಿಯೂ ಅವರು ಕೆಲಸ ಮಾಡುತ್ತಿದ್ದರು. ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಎನ್ನುವುದನ್ನು ಹತ್ತಿರದಿಂದ ನೋಡುವ ಅವಕಾಶ ನನಗೆ ದೊರೆಯಿತು. ಇನ್ನೊಂದೆಡೆ ಶ್ರೀ ಅನಂತಕುಮಾರ್ ಅವರು ದಿನದಲ್ಲಿ ಹದಿನೆಂಟು ಗಂಟೆಗಳಿಗಿಂತ ಹೆಚ್ಚು ಕಾಲ ನಿರಂತರವಾಗಿ ದೇಶಕ್ಕಾಗಿ ಕೆಲಸ ಮಾಡುತ್ತಿದ್ದರು. ಅಷ್ಟು ಸಣ್ಣ ವಯಸ್ಸಿನಲ್ಲಿಯೇ ಅವರಲ್ಲಿದ್ದ ಪ್ರಬುದ್ಧತೆ, ಅವರು ಕೆಲಸ ಮಾಡುವ ರೀತಿ, ಅವರ ಚಿಂತನೆಗಳು, ವಿಚಾರಗಳು ಎಲ್ಲವನ್ನೂ ಹತ್ತಿರದಿಂದ ನೋಡುವ ಅವಕಾಶ ನನಗೆ ದೊರೆಯಿತು. ಆ ಕಾಲದಲ್ಲಿ ಇಂಜಿನಿಯರ್ ಆಗಿದ್ದ ನಾನು ರಕ್ಷಣಾ ಇಲಾಖೆಯಲ್ಲಿ ವೃತ್ತಿನಿರತಳಾಗಿದ್ದೆ. ಹೀಗಾಗಿ ಸಾಮಾಜಿಕ ಕಾರ್ಯಗಳಿಗೆ ಹೆಚ್ಚಿನ ಸಮಯ ದೊರೆಯದಿದ್ದರೂ ಅನಂತಕುಮಾರರ ಸಾಮಾಜಿಕ ಕಾರ್ಯಗಳ ವರದಿ ನನ್ನ ಕಿವಿಯ ಮೇಲೆ ನಿರಂತರವಾಗಿ ಬೀಳುತ್ತಿತ್ತು.

ನಂತರ ನನ್ನ ರಕ್ಷಣಾ ಇಲಾಖೆಯ ಕೆಲಸವನ್ನು ತ್ಯಜಿಸಿ ಪೂರ್ಣಾವಧಿ ಮನೆಯನ್ನು ನೋಡಿಕೊಳ್ಳಬೇಕು, ಜೊತೆಗೆ ಶ್ರೀ ಅನಂತಕುಮಾರ್ ಅವರ ಕೆಲಸಕ್ಕೂ ಸಹಾಯ ಮಾಡಬೇಕು ಎಂದು ನಿರ್ಧರಿಸಿದೆ. ಆದರೆ ಉದ್ಯೋಗಕ್ಕೆ ರಾಜೀನಾಮೆ ನೀಡಿದಾಗ ಅದುವರೆಗೆ ಅನಂತಕುಮಾರರ ಕಾರ್ಯಗಳನ್ನು ಹತ್ತಿರದಿಂದ ನೋಡಿದ್ದ ನಾನು ಕೇವಲ ನನ್ನ ಕುಟುಂಬವೇ ದೊಡ್ಡದು ಎಂದು ಭಾವಿಸಿಕೊಳ್ಳುವುದನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಆ ಸಂದರ್ಭದಲ್ಲಿ ನಾವು ಕುಟುಂಬದವರೆಲ್ಲ ಸೇರಿ ಸಣ್ಣ ಪ್ರಮಾಣದಲ್ಲಾದರೂ ನಮಗಿರುವ ವೇಳೆಯಲ್ಲಿಯೇ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡೋಣ ಎಂದು ಶ್ರೀ ಅನಂತಕುಮಾರ್ ಸೂಚಿಸಿದರು. ಆ ವೇಳೆಗೆ ನಮ್ಮ ಅತ್ತೆಯವರಾದ ಶ್ರೀಮತಿ ಗಿರಿಜಾ ಶಾಸ್ತ್ರಿಯವರು ತೀರಿಕೊಂಡು ಆರು ತಿಂಗಳು ಕಳೆದಿದ್ದವು. ಅವರ ನೆನಪಿನಲ್ಲಿ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡುವುದು ಎಂದು ನಿರ್ಧರಿಸಿ "ಅದಮ್ಯ ಚೇತನ" ಎನ್ನುವ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡಿದೆವು. ನಂತರ ನಮ್ಮ ಸ್ನೇಹಿತರು, ಕುಟುಂಬದ ಇತರ ಸದಸ್ಯರು ಕೈ ಜೋಡಿಸುತ್ತಿದ್ದ ಹಾಗೆಯೇ ಸಂಸ್ಥೆಯೂ ಬೆಳೆಯಿತು. ಅನ್ನ, ಅಕ್ಷರ, ಆರೋಗ್ಯ ಎಂಬ ಧ್ಯೇಯವನ್ನಿಟ್ಟುಕೊಂಡು ಪ್ರಾರಂಭವಾದ ಈ ಸಂಸ್ಥೆಯು ಇಂದು ನಮಗೇ ತಿಳಿಯದಂತೆ ಅಗಾಧವಾಗಿ ಬೆಳೆದು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಭಾರತೀಯ ಇತಿಹಾಸವನ್ನು ಗಮನಿಸಿದರೆ ಸಾಮಾಜಿಕವಾಗಿ ಕೆಲಸ ಮಾಡುವ ತರಬೇತಿ ನಮಗೆ ನಮ್ಮ ಪುರಾಣಗ್ರಂಥಗಳಿಂದಲೇ ದೊರೆಯುವುದು ಕಂಡುಬರುತ್ತದೆ. ಈ ಪ್ರವೃತ್ತಿ ನಮ್ಮಲ್ಲಿ ಸಹಜವಾಗಿಯೇ ಬಂದಿದೆ. ನಾವು ಬಾಲ್ಯದಲ್ಲಿ ಕಲಿತ ಶ್ಲೋಕಗಳೂ ವಸುಧೈವ ಕುಟುಂಬಕಂ ಎಂಬ ತತ್ತ್ವವನ್ನೇ ಸಾರುತ್ತವೆ. ನಾವು ಮಾಡುವ ಯಜ್ಞ, ಯಾಗ, ಹೋಮ ಎಲ್ಲವೂ ಲೋಕ ಕಲ್ಯಾಣಕ್ಕಾಗಿಯೇ ಎಂದು ಹೇಳುತ್ತೇವೆ. ಅಂದರೆ ಮೊದಲಿನಿಂದಲೂ ನಮ್ಮ ಹಿರಿಯರು ಈ ಒಂದು ಮೌಲ್ಯವನ್ನು ನಮ್ಮಲ್ಲಿ ಬಿತ್ತಿದ್ದರು. ಜೊತೆಗೆ ನಾವು ಮಾಡುವ ಎಲ್ಲ ಕೆಲಸಗಳ ಫಲಾಫಲಗಳೂ ಭಗವಂತನಿಗೆ ಅರ್ಪಣೆಯಾಗಬೇಕು ಎಂದು ಹೇಳುತ್ತಿದ್ದರು. ಹೀಗಾಗಿ ಈ ರಾಷ್ಟ್ರೀಯ ದೃಷ್ಟಿಯು ನಮಗೆ ಅರಿವಿಲ್ಲದಂತೆಯೇ ನಮ್ಮ ರಕ್ತಗತವಾಗಿದೆ ಎಂದು ನನ್ನ ಭಾವನೆ.

ಭಾರತೀಯವಾದ ಈ ಉದಾತ್ತ ತತ್ತ್ವವನ್ನು ಅರ್ಥ ಮಾಡಿಕೊಂಡು ಜೀವನದಲ್ಲಿ ರೂಢಿಸಿಕೊಳ್ಳಲು ಸೂಕ್ತ ಅವಕಾಶ ಮತ್ತು ವೇದಿಕೆ ಎಲ್ಲರಿಗೂ ದೊರೆಯುವುದಿಲ್ಲ. ಆದರೆ ನನಗೆ ವಿದ್ಯಾರ್ಥಿ ಪರಿಷತ್ತಿನ ಜೊತೆಗೆ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಈ ಅವಕಾಶ ಒದಗಿ ಬಂದಿತು. ರಕ್ಷಣಾ ಇಲಾಖೆಯ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ಕೆಲಸ ಮಾಡುತ್ತಿದ್ದ ವಿಜ್ಞಾನಿಗಳ ಉದಾತ್ತ ರಾಷ್ಟ್ರೀಯ ಮನೋಭಾವದ ಪರಿಚಯವೂ ನನಗಾಯಿತು. 1996-97ರ ಹೊತ್ತಿಗೆ ಬೆಂಗಳೂರಿನಲ್ಲಿ ಅನೇಕ ಐಟಿಬಿಟಿ ಕಂಪೆನಿಗಳು ಪ್ರಾರಂಭವಾಗಿದ್ದವು. ಆಗ ಕಂಪ್ಯೂಟರ್ ಕ್ಷೇತ್ರದಲ್ಲಿ ಪರಿಣತರಿಗೆ ಅಪಾರ ಬೇಡಿಕೆಯಿತ್ತು. ನಿಮಗೆ ಈಗ ದೊರೆಯುತ್ತಿರುವ ವೇತನದ ಐದಾರು ಪಟ್ಟು ಹೆಚ್ಚು ವೇತನ ನೀಡುತ್ತೇವೆ, ಕಾರು, ಮನೆ ಕೊಡುತ್ತೇವೆ, ಬನ್ನಿ ಎಂದು ಕರೆದರೂ ನಮ್ಮ ಸಂಸ್ಥೆಗಳನ್ನು ಬಿಟ್ಟು ಹೋದವರು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಈ ದೇಶಕ್ಕೆ ಏನಾದರೂ ಮಹತ್ವದ ಕೊಡುಗೆಯನ್ನು ನೀಡಬೇಕೆಂಬ ಹಂಬಲದಿಂದ ಅಲ್ಲಿನ ವಿಜ್ಞಾನಿಗಳು ಕೆಲಸ ಮಾಡುತ್ತಿದ್ದರು. ತಾವು ಕೆಲಸ ಮಾಡುತ್ತಿದ್ದ ಸಂಸ್ಥೆಯ ವಿವರಗಳನ್ನು ಬೇರೆಯವರಿಗೆ ಬಿಟ್ಟುಕೊಡಬಾರದು, ತಾವು ಪಡೆದುಕೊಂಡಿರುವ ಜ್ಞಾನವು ಬಹುರಾಷ್ಟ್ರೀಯ ಕಂಪೆನಿಗಳ ವಶವಾಗಬಾರದು ಎಂಬ ಅವರ ಭಾವನೆಗಳಿಗೆ ರಾಷ್ಟ್ರೀಯತೆಯ ಸಂಸ್ಕಾರವೇ ಕಾರಣ. ಅವರಲ್ಲಿ ತಮ್ಮ ವೇತನ, ತಮ್ಮ ಸೌಲಭ್ಯಗಳಿಗಿಂತ ದೇಶಹಿತವೇ ದೊಡ್ಡದು ಎಂಬ ಭಾವನೆಯಿದ್ದಿತ್ತು. ನಮ್ಮಲ್ಲಿ ಈ ಎರಡೂ ಸಂಗತಿಗಳು ಮೇಳವಿಸಿಕೊಂಡಿದ್ದರಿಂದಲೇ "ಅದಮ್ಯ ಚೇತನ" ಸಂಸ್ಥೆಯನ್ನು ಪ್ರಾರಂಭ ಮಾಡುವುದು ನಮಗೆ ಸಾಧ್ಯವಾಯಿತು.

ಸಣ್ಣ ಪ್ರಮಾಣದಲ್ಲಿಯೇ ಪ್ರಾರಂಭವಾದ ಈ ಸಂಸ್ಥೆ ಈ ರೀತಿಯಲ್ಲಿ ಬೆಳೆದು ನಿಲ್ಲಲು ಬೇಕಾದ ಬಲವನ್ನು ಒದಗಿಸಿದವರು ನಮ್ಮ ಅಡುಗೆಯವರು, ಹೆಚ್ಚೇನೂ ಓದಿರದ ಕಾರ್ಯಕರ್ತರು, ಗೃಹಿಣಿಯರು, ಅಂತೆಯೇ ವಿದ್ಯಾವಂತ ಸ್ವಯಂಸೇವಕರು. ಇವರಾರೂ ತಮಗೊಂದು ಹೆಸರು ಬರುತ್ತದೆ ಎಂದು ಇಲ್ಲಿ ಬಂದು ಕೈಜೋಡಿಸಿಲ್ಲ. ರಾಷ್ಟ್ರಸೇವೆಯ ಅದಮ್ಯ ಉತ್ಸಾಹದಿಂದ ಅವರೆಲ್ಲ ಇಲ್ಲಿ ಬಂದಿದ್ದಾರೆ. ಇವರೆಲ್ಲರ ಸ್ಫೂರ್ತಿ, ಉತ್ಸಾಹಗಳನ್ನು ಗಮನಿಸಿದರೆ ಅದಮ್ಯ ಚೇತನ ಸಂಸ್ಥೆಯು ದಾಪುಗಾಲಿಟ್ಟು ಮುನ್ನಡೆಯುವುದು ಖಚಿತ ಎಂದು ನನ್ನ ನಂಬಿಕೆ. ( ಸೌಜನ್ಯ: ಆಕಾಶವಾಣಿ, ಮೈಸೂರು)

# ವಿಮಾನಯಾನಕ್ಕೊಂದು ನವೀನ ಆಯಾಮ

ಪುಟ 1 ರಿಂದ ನಡುವೆ ಏರ್ ಇಂಡಿಯಾ ಸಂಸ್ಥೆ 353 ಕೋಟಿ ರೂಪಾಯಿಗಳ ಲಾಭ ಗಳಿಸಿತು. ಇವೇ ವರ್ಷಗಳಲ್ಲಿ ಖಾಸಗಿ ವಿಮಾನಯಾನ ಸಂಸ್ಥೆಗಳ ಅಬ್ಬರ ಜೋರಾಗಿತ್ತು ಮತ್ತು ಇಂಧನದ ಬೆಲೆಯಲ್ಲಿಯೂ ಭಾರೀ ಏರಿಕೆ ಉಂಟಾಗಿತ್ತು ಎಂಬುದನ್ನು ಮರೆಯಲಾಗದು.

ವಿಮಾನಗಳ ಮೂಲಕ ಸರಕು ಸಾಗಣೆಯ ಸಾಧ್ಯತೆಗಳನ್ನು ವಿಸ್ತರಿಸಲು ಅನಂತಕುಮಾರರ ಕಾಲದಲ್ಲಿ ಇಂಡಿಯನ್ ಏರ್ಲೈನ್ಸ್ ಮತ್ತು ಅಮೆರಿಕದ ಎಮೆರಿ ವರ್ಲ್ಡ್ ವೈಡ್ ಸಂಸ್ಥೆಯ ಜೊತೆ ಮಾರುಕಟ್ಟೆ ಮೈತ್ರಿ ಒಪ್ಪಂದವೊಂದಕ್ಕೆ 15/08/1999 ರಂದು ಸಹಿ ಹಾಕಲಾಯಿತು. ಇದರಿಂದಾಗಿ ಇಂಡಿಯನ್ ಏರ್ಲೈನ್ಸ್ ಸಂಸ್ಥೆಗೆ ಹೆಚ್ಚಿನ ಲಾಭ ಹರಿದುಬಂದಿತು. ಸರಕು ಸಾಗಣೆ ವ್ಯವಹಾರದಲ್ಲಿ ನಡೆದ ಸುಧಾರಣೆಗಳಿಂದಾಗಿ ಕೇವಲ ಸರಕು ಸಾಗಾಣಿಕೆ ವ್ಯವಹಾರದಿಂದಲೇ 2000ನೇ ಇಸವಿಯಲ್ಲಿ 280 ಕೋಟಿ ರೂಪಾಯಿಗಳಷ್ಟು ಆದಾಯ ಬಂದಿತು.

**ಜನಪರ ನವೀನ ಯೋಜನೆಗಳು**

ತಮ್ಮ ಅಧಿಕಾರವು ಕೇವಲ 18 ತಿಂಗಳಷ್ಟು ಅಲ್ಪಾವಧಿಯದಾಗಿದ್ದರೂ ಅನಂತಕುಮಾರರು ಅನೇಕ ನವೀನ ಯೋಜನೆಗಳನ್ನು ಪ್ರಾರಂಭಿಸಿದರು. "ಮುಕ್ತ ಆಕಾಶ ನಿಯಮ" ಗಳ ಅಡಿಯಲ್ಲಿ ಖಾಸಗಿ ವಿಮಾನ ಯಾನ ಸಂಸ್ಥೆಗಳಿಗೆ ಭಾರತದಲ್ಲಿ ಪರಿಚಾಲನೆ ನಡೆಸಲು ಅನುಮತಿ ನೀಡಿದರು. ಜೊತೆಗೆ ಬೇಡಿಕೆಗಳಿಗನುಗುಣವಾಗಿ ಬದಲಾಗುವ ದರ ಪದ್ಧತಿ (Variable Tariff Policy) ಯನ್ನೂ ಜಾರಿಗೆ ತರುವುದರ ಮೂಲಕ ವಿಮಾನಯಾನದ ಅನುಕೂಲಗಳನ್ನು ಜನಸಾಮಾನ್ಯರಿಗೂ ನಿಲುಕುವಂತೆ ಮಾಡಿದರು. ಈ ನಿಯಮದಿಂದ ಪ್ರಯಾಣಿಕರ ಸಂಖ್ಯೆಯಲ್ಲಿ ಅಗಾಧ ಏರಿಕೆಯಾದುದರಿಂದ ವಿಮಾನಯಾನ ಸಂಸ್ಥೆಗಳಿಗೂ ನಷ್ಟವಾಗಲಿಲ್ಲ.

ಅನಂತಕುಮಾರರ ಪರಿಶ್ರಮದಿಂದ ದೆಹಲಿಯಲ್ಲಿ ಹೊಸ ಟರ್ಮಿನಲ್ ನಿರ್ಮಾಣಗೊಂಡಿತು. ಕೇರಳದಲ್ಲಿ ದೇಶದ ಮೊತ್ತಮೊದಲ ಖಾಸಗಿ ವಿಮಾನ ನಿಲ್ದಾಣವೂ ಪ್ರಾರಂಭವಾಯಿತು. ವಿಮಾನಯಾನ ಖಾತೆಯನ್ನು ನಾಗರಿಕರ ಹತ್ತಿರಕ್ಕೆ ಕೊಂಡೊಯ್ಯಲು ವಿಮಾನ ನಿಲ್ದಾಣಗಳಿಗೆ ಸ್ಥಳೀಯ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳನ್ನಿಡುವ ಪದ್ಧತಿಯನ್ನು ಅವರು ಪ್ರಾರಂಭಿಸಿದರು. ಅದುವರೆಗೆ ಬಹುತೇಕ ಒಂದು ಕುಟುಂಬದ ಸದಸ್ಯರ ಹೆಸರುಗಳನ್ನೇ ಎಲ್ಲ ಸರಕಾರೀ ಸಂಸ್ಥೆಗಳಿಗೆ, ಯೋಜನೆಗಳಿಗೆ ಇಡುವ ಕ್ರಮವನ್ನು ತಪ್ಪಿಸಿ ಮುಂಬಯಿಯಲ್ಲಿ ಛತ್ರಪತಿ ಶಿವಾಜಿ, ಇಂದೂರಿನಲ್ಲಿ ಅಹಲ್ಯಾಬಾಯಿ ಹೋಳ್ಕರ್ ಗುವಾಹಾತಿಯಲ್ಲಿ ಲೋಕಪ್ರಿಯ ಗೋಪೀನಾಥ ಬೋರ್ಡೋಲೋಯ್, ಪಾಟ್ನಾದಲ್ಲಿ ಜಯಪ್ರಕಾಶ ನಾರಾಯಣ, ರಾಯಪುರದಲ್ಲಿ ಸ್ವಾಮೀ ವಿವೇಕಾನಂದ, ಮುಂತಾದ ಮಹನೀಯರ ಹೆಸರುಗಳನ್ನು ಸುಮಾರು 28 ವಿಮಾನನಿಲ್ದಾಣಗಳಿಗೆ ಇಡಲಾಯಿತು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ ಹೆಸರನ್ನು ಇಡುವುದರಲ್ಲಿ ಅನಂತಕುಮಾರರ ಪಾತ್ರ ಅವಿಸ್ಮರಣೀಯ.


**ವಜ್ರಾದಪಿ ಕಠೋರಾಣಿ.......**

ಇವೆಲ್ಲವುಗಳ ಮಧ್ಯೆ ಅನೇಕ ಸಮಸ್ಯೆಗಳೂ ಎದುರಾದವು. ಪ್ರಮುಖವಾಗಿ, ದೇಶದ ಎಲ್ಲ ನಿಲ್ದಾಣಗಳಲ್ಲಿ ವಿಮಾನ ಸಂಚಾರವನ್ನು ನಿಯಂತ್ರಿಸುವ ಏರ್ ಟ್ರಾಫಿಕ್ ಕಂಟ್ರೋಲ್ ಸಿಬ್ಬಂದಿಗಳು ತಮ್ಮ ವೇತನವನ್ನು ಐದು ಪಟ್ಟು ಏರಿಸುವಂತೆ ಧರಣಿ ಮುಷ್ಕರ ಪ್ರಾರಂಭಿಸಿದರು. ಅವರ ಬೇಡಿಕೆಗಳು ನ್ಯಾಯಯುತವಾಗಿಲ್ಲ, ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಸರಕಾರ ಸಿದ್ಧವಿದೆ ಎಂದು ಮುಷ್ಕರ ನಿರತರಿಗೆ ಮನವರಿಕೆ ಮಾಡಿಸುವ ಎಲ್ಲ ಪ್ರಯತ್ನಗಳೂ ವ್ಯರ್ಥವಾದವು. ಇಂತಹ ಸಂದರ್ಭದಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲೂ ಅವರು ಹಿಂಜರಿಯಲಿಲ್ಲ. ಮುಷ್ಕರ ನಿರತರಲ್ಲಿ ಐದಾರು ಜನರ ಸೇವೆಯನ್ನು ಬರಖಾಸ್ತು ಮಾಡುವುದರ ಜೊತೆಗೆ ಏರ್ ಟ್ರಾಫಿಕ್ ಕಂಟ್ರೋಲ್ ವ್ಯವಸ್ಥೆಯನ್ನು ನಿರ್ವಹಿಸಲು ವಾಯುಸೇನೆಯ ಸಹಾಯವನ್ನು ಪಡೆದುಕೊಂಡರು. ಬೇರೆ ದಾರಿ ಕಾಣದೆ ಮುಷ್ಕರನಿರತರು ಧರಣಿಯನ್ನು ಕೈಬಿಟ್ಟು ಕೆಲಸಕ್ಕೆ ಹಾಜರಾದರು. ಮುಷ್ಕರ ಎರಡೇ ದಿನಗಳಲ್ಲಿ ಕೊನೆಗೊಂಡಿತು.

ಅನಂತಕುಮಾರರ ಕಾರ್ಯವೈಖರಿಯನ್ನು ಮೆಚ್ಚಿಕೊಂಡ ಅಟಲ್ ಬಿಹಾರಿ ವಾಜಪೇಯಿಯವರು ಅವರಿಗೆ ಪ್ರವಾಸೋದ್ಯಮ ಖಾತೆಯ ಹೆಚ್ಚುವರಿ ಜವಾಬ್ದಾರಿಯನ್ನೂ ನೀಡಿದರು. ನಾಗರಿಕ ವಿಮಾನಯಾನ ಖಾತೆಯ ಹೊಣೆಯನ್ನು ನಿರ್ವಹಿಸಿದ ಹದಿನೆಂಟು ತಿಂಗಳುಗಳ ಅವಧಿಯಲ್ಲಿ ಅನಂತಕುಮಾರರು ದೇಶದ ವಿಮಾನಯಾನ ನಕ್ಷೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು, ಬದಲಾವಣೆಗಳನ್ನು ಉಂಟುಮಾಡಿದ್ದರು.

**ಬೆಂಗಳೂರಿನ ಹೆಮ್ಮೆ**

ಆಗಸದಲ್ಲಿ ಕಣ್ಣು ನೆಟ್ಟಿದ್ದರೂ ಅನಂತಕುಮಾರರು ನೆಲದಿಂದ ತಮ್ಮ ಕಾಲು ಕೀಳಲಿಲ್ಲ. ತಮ್ಮನ್ನು ಪ್ರೀತಿಯಿಂದ ಆರಿಸಿ ಕಳಿಸಿದ ಬೆಂಗಳೂರಿನ ಜನರ ಋಣವನ್ನು ತೀರಿಸಲು ಮರೆಯಲಿಲ್ಲ. ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲು ಅವರು ಕ್ರಮತೆಗೆದುಕೊಂಡರು. ಹೊಸ ಟರ್ಮಿನಲ್ಲುಗಳನ್ನು ಸ್ಥಾಪಿಸಿದರು, ಹೊಸ ಏರೋಬ್ರಿಜ್ ಗಳು ಬಂದವು. ರನ್ ವೇಯನ್ನು ನವೀಕರಿಸಿದರು. ಹೀಗಾಗಿ ಅದುವರೆಗೆ ಕೇವಲ ಬೆರಳೆಣಿಕೆಯಷ್ಟು ವಿಮಾನಗಳು ಇಳಿಯುತ್ತಿದ್ದ ನಿಲ್ದಾಣದಲ್ಲಿ ಈಗ ಅನೇಕ ವಿಮಾನಗಳು



ಇಳಿಯಲಾರಂಭಿಸಿದವು.

ಅಂದಿನ ಕಾಲದಲ್ಲಿ ಬೆಂಗಳೂರಿನಿಂದ ಯಾವ ಅಂತಾರಾಷ್ಟ್ರೀಯ ವಿಮಾನಗಳೂ ಹಾರುತ್ತಿರಲಿಲ್ಲ. ವಿದೇಶಕ್ಕೆ ಹೋಗುವ ಪ್ರಯಾಣಿಕರು ಮುಂಬಯಿಗೋ, ಚೆನ್ನೈ ನಗರಕ್ಕೋ ಹೋಗಿ ಅಲ್ಲಿಂದ ಮುಂದೆ ಪ್ರಯಾಣಿಸಬೇಕಿತ್ತು. ಅನಂತಕುಮಾರರು ಅಧಿಕಾರ ವಹಿಸಿಕೊಂಡ ಕೆಲವೇ ತಿಂಗಳಲ್ಲಿ ಬೆಂಗಳೂರಿನಿಂದ ಪಶ್ಚಿಮದ ನ್ಯೂಯಾರ್ಕ್ ಮತ್ತು ಪೂರ್ವದ ಸಿಂಗಾಪುರಗಳಿಗೆ ನೇರ ವಿಮಾನ ಸಂಪರ್ಕ ದೊರೆಯಿತು. ಹೆಚ್ ಎ ಎಲ್ ವಿಮಾನನಿಲ್ದಾಣದಿಂದ ಅಮೆರಿಕಾದೇಶಕ್ಕೆ ನೇರ ವಿಮಾನಸೌಲಭ್ಯದ ಪ್ರಾರಂಭಕ್ಕೂ ಇನ್ನೊಮ್ಮೆ ಹೊಸ ಟರ್ಮಿನಲ್ ಉದ್ಘಾಟನೆಗೂ ಸ್ವತಃ ಪ್ರಧಾನಿಯವರೇ ಆಗಮಿಸಿದ್ದುದು ವಿಶೇಷ. ಹೀಗೆ ಅಂತಾರಾಷ್ಟ್ರೀಯ ವಿಮಾನಯಾನ ನಕ್ಷೆಯಲ್ಲಿ ಪ್ರಮುಖವಾಗಿ ಗುರುತಿಸಿಕೊಂಡ ನಗರಕ್ಕೆ ವಿಸ್ತಾರವಾದ ಪ್ರತ್ಯೇಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಅಗತ್ಯವನ್ನು ಮನಗಂಡ ಅನಂತಕುಮಾರರು ಬೆಂಗಳೂರಿಗೆ ಸಮೀಪದ ದೇವನಹಳ್ಳಿಯಲ್ಲಿ ನಿವೇಶನವನ್ನು ಗುರುತಿಸಿ ಅಂದು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜೆ ಎಚ್ ಪಟೇಲರನ್ನು ಒಪ್ಪಿಸಿ ಸರಕಾರದಿಂದ ತಿಳುವಳಿಕೆ ಪತ್ರ ( M O U ) ಕ್ಕೆ ಅಂಕಿತವನ್ನುಹಾಕಿಸಿಕೊಂಡರು. ಒಂದಿನಿತೂ ವೇಳೆಯನ್ನು ವ್ಯರ್ಥ ಮಾಡದೆ ಹೊಸ ವಿಮಾನ ನಿಲ್ದಾಣದ ನಿರ್ಮಾಣದತ್ತ ಕಾರ್ಯೋನ್ಮುಖರಾದರು. ಅದಕ್ಕೆ ಮೊದಲಿನ 10-15 ವರ್ಷಗಳಲ್ಲಿ ತಮ್ಮ ವೈಯಕ್ತಿಕ ಹಿತಾಸಕ್ತಿಯನ್ನು ಮುಂದೆ ಮಾಡಿಕೊಂಡು ವಿಮಾನ ನಿಲ್ದಾಣಕ್ಕೆ ನಿವೇಶನವನ್ನು ಗುರುತಿಸಲೂ ಪರದಾಡುತ್ತಿದ್ದ ವಿರೋಧಿಗಳು ಅನಂತಕುಮಾರರ ಕೆಲಸದ ವೇಗವನ್ನು ಗಮನಿಸಿ ಮೂಗಿನ ಮೇಲೆ ಬೆರಳಿಡುವಂತಾಯಿತು.

ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣಗೊಂಡ ಬೆಂಗಳೂರು ವಿಮಾನ ನಿಲ್ದಾಣದ ಮೇಲುಸ್ತುವಾರಿಯನ್ನು ಅನಂತಕುಮಾರರೇ ನಿರ್ವಹಿಸಿದರು. ವಿಮಾನ ನಿಲ್ದಾಣದಿಂದ ಒಳನಾಡಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಮತ್ತು ಸಾರಿಗೆ ವ್ಯವಸ್ಥೆಯ ಬಗ್ಗೆಯೂ ಅವರು ಗಮನ ಹರಿಸಿದ್ದರು. ಅನಂತಕುಮಾರರ ಪರಿಶ್ರಮದಿಂದ ಸುವರ್ಣ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯೂ ಕರ್ನಾಟಕದ ಮೂಲಕ ಹಾದುಹೋಗುವಂತಾಯಿತು. ಇದರಿಂದಾಗಿ ಕರ್ನಾಟಕ ಮಾತ್ರವಲ್ಲ, ಆಂಧ್ರಪ್ರದೇಶದ ರಾಯಲಸೀಮೆಯ ಭಾಗಗಳಿಗೂ ಸುಲಭವಾಗಿ ಈ ನಿಲ್ದಾಣದ ಅನುಕೂಲತೆ ದೊರಕುವಂತಾಯಿತು. ಇಂದು ದೇಶದಲ್ಲಿ ಅತ್ಯಧಿಕ ಬೆಳವಣಿಗೆಯ ದರವನ್ನು ಹೊಂದಿದ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಯನ್ನು ಹೊಂದಿದ ನಮ್ಮ ಹೆಮ್ಮೆಯ ಬೆಂಗಳೂರು ವಿಮಾನ ನಿಲ್ದಾಣವು ಮುಂದೆ ಮುಂಬಯಿ, ದೆಹಲಿ ಮತ್ತು ಹೈದರಾಬಾದ್ ನಿಲ್ದಾಣಗಳ ಸ್ಥಾಪನೆಗೆ/ನವೀಕರಣಕ್ಕೆ ಮಾದರಿಯಾಯಿತು.

ಬೆಂಗಳೂರು ನಗರದ ಸುತ್ತ ಮುತ್ತ ಹೂವು, ಹಣ್ಣು ಮತ್ತು ತರಕಾರಿಗಳು ಹೇರಳವಾಗಿ ಬೆಳೆಯುತ್ತವೆ. ಬೆಂಗಳೂರಿನ ಗುಲಾಬಿಗೆ ವಿದೇಶಗಳಲ್ಲಿ ಅಪಾರ ಬೇಡಿಕೆಯಿದ್ದರೂ ಸಾಗಾಣಿಕೆಯ ಅನಾನುಕೂಲತೆಗಳಿಂದ ರೈತರಿಗೆ ರಫ್ತು ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಅದೇ ರೀತಿ ಬೆಂಗಳೂರಿನ ಹಣ್ಣು, ತರಕಾರಿಗಳಿಗೂ ದೇಶವಿದೇಶಗಳಲ್ಲಿ ಮಾರುಕಟ್ಟೆಯಿದ್ದರೂ ವಿಮಾನ ನಿಲ್ದಾಣದಲ್ಲಿ ಸೂಕ್ತ ಸಂಗ್ರಹಾಗಾರವಿರಲಿಲ್ಲ. ಇದನ್ನು ಮನಗಂಡ ಅನಂತಕುಮಾರರು ದೆಹಲಿಯಿಂದ ಹೊರತಾದ ಮೊತ್ತಮೊದಲ ಬೇಗ ಹಾಳಾಗುವ ವಸ್ತುಗಳ ಸಂಗ್ರಹಾಗಾರ (Perishable Cargo Centre) ಮತ್ತು ಟರ್ಮಿನಲ್ ಸ್ಥಾಪನೆಗೆ ಶ್ರಮವಹಿಸಿದರು. ಈ ಒಂದು ಉಪಕ್ರಮದಿಂದಲೇ ಕರ್ನಾಟಕದ ಆರ್ಥಿಕ ವಹಿವಾಟು ವಾರ್ಷಿಕವಾಗಿ 300 ಕೋಟಿ ರೂಪಾಯಿಗಳಷ್ಟು ಹೆಚ್ಚಿತು ಎಂದರೆ ಇದರಿಂದ ರೈತರಿಗೆ ದೊರೆತ ಆರ್ಥಿಕ ಪ್ರಯೋಜನವನ್ನು ಊಹಿಸಿಕೊಳ್ಳಬಹುದು.

ಅಸಾಧಾರಣ ನಾಯಕತ್ವ ಹಾಗೂ ಕರ್ತೃತ್ವಶಕ್ತಿಯುಳ್ಳವರಾಗಿದ್ದ ಅನಂತಕುಮಾರ್ ತಾವು ಕೇಂದ್ರಮಂತ್ರಿಮಂಡಲದಲ್ಲಿ ವಹಿಸಿಕೊಂಡ ಖಾತೆಗಳನ್ನೆಲ್ಲ ಯಶಸ್ವಿಯಾಗಿ ನಿರ್ವಹಿಸಿದುದರಲ್ಲಿ ಅಚ್ಚರಿಯೇನೂ ಇಲ್ಲದಿರಬಹುದು . ಆದರೆ, ನಮ್ಮ ಸಮಾಜದಲ್ಲಿ ಅಂತಹ ನಾಯಕತ್ವ, ವ್ಯಕ್ತಿತ್ವ ಮತ್ತು ಕರ್ತೃತ್ವಗಳು ಕಾಣಸಿಗುವುದೇ ಅತ್ಯಪೂರ್ವ. ಈ ದೃಷ್ಟಿಯಿಂದ ಅನಂತಕುಮಾರರ ಸಾಧನೆಯ ಮೈಲುಗಲ್ಲುಗಳು ನಾಯಕತ್ವದ ಆಕಾಂಕ್ಷಿಗಳಿಗೆ ಪರಿಣಾಮಕಾರಿ ಮಾರ್ಗದರ್ಶನ ನೀಡಬಲ್ಲವು.

# ಆತ್ಮನಿರ್ಭರ ಭಾರತ : 5G ತಂತ್ರಜ್ಞಾನದ ಅವಕಾಶಗಳು

ಪ್ರೊ. ಅಭಯ ಕರಂದಿಕರ
ನಿರ್ದೇಶಕರು, ಐ ಐ ಟಿ, ಕಾನ್ಪುರ

ಸರಕಾರದ ನೀತಿ ಮತ್ತು ಕಾರ್ಯತಂತ್ರಗಳಲ್ಲಿ ತಂತ್ರಜ್ಞಾನವು ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಆಧುನಿಕ ಭಾರತದ ಆಡಳಿತದ ಕಾರ್ಯನೀತಿಗಳಲ್ಲಿ ಆರೋಗ್ಯ ಮತ್ತು ಶಿಕ್ಷಣಕ್ಕೆ ಎಷ್ಟು ಮಹತ್ವವನ್ನು ನೀಡಲಾಗಿದೆಯೋ ಅಷ್ಟೇ ಮಹತ್ವವನ್ನು ತಂತ್ರಜ್ಞಾನ ಕ್ಷೇತ್ರಕ್ಕೂ ನೀಡಲಾಗುತ್ತಿದೆ.

ರಾಷ್ಟ್ರದ ಒಟ್ಟು ವ್ಯವಸ್ಥೆಯನ್ನು ಆರ್ಥಿಕ, ಸಾಮಾಜಿಕ ಮತ್ತು ರಕ್ಷಣೆ ಎಂದು ಮೂರು ವಿಭಾಗ (Vertical)ಗಳಾಗಿ ವಿಂಗಡಿಸಬಹುದು. ಚಿಲ್ಲರೆ ವ್ಯವಹಾರ, ಕೃಷಿ, ಉತ್ಪಾದನೆ, ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳನ್ನು ಆರ್ಥಿಕ ವಿಭಾಗದಲ್ಲಿ ಗುರುತಿಸಿದರೆ ಆರೋಗ್ಯ, ಆಡಳಿತ ಮತ್ತು ಶಿಕ್ಷಣವನ್ನು ಸಾಮಾಜಿಕ ವಲಯದಲ್ಲಿ ಗುರುತಿಸಬಹುದು. ಸೇನೆ, ಸೈಬರ್ ಕ್ಷೇತ್ರ ಮತ್ತು ಬೇಹುಗಾರಿಕೆಗಳನ್ನು ರಕ್ಷಣಾವಲಯದಲ್ಲಿ ಗುರುತಿಸಬಹುದು. ಈ ಮೂರೂ ವಿಭಾಗಗಳ ಎಲ್ಲ ಕ್ಷೇತ್ರಗಳೂ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನದ ಮೇಲೆ ಹೆಚ್ಚುಹೆಚ್ಚಾಗಿ ಅವಲಂಬಿತವಾಗುತ್ತಿವೆ. ಮಾಹಿತಿ ತಂತ್ರಜ್ಞಾನವು ಈ ಎಲ್ಲ ಕ್ಷೇತ್ರಗಳ ಬೆನ್ನೆಲುಬು ಎಂದರೂ ಅತಿಶಯೋಕ್ತಿಯಲ್ಲ.

**ಶಕ್ತಿಕೇಂದ್ರಗಳಲ್ಲಿ ವ್ಯತ್ಯಯ**

ಬೌದ್ಧಿಕ ಆಸ್ತಿ ಹಕ್ಕುಗಳು ಒಂದು ದೇಶದ ಆರ್ಥಿಕ ಮತ್ತು ರಾಷ್ಟ್ರೀಯ ಸಾರ್ವಭೌಮತ್ವವನ್ನು ನಿರ್ಧರಿಸುತ್ತಿರುವ ಕಾಲದಲ್ಲಿ ನಾವಿದ್ದೇವೆ. ಈ ನಿಟ್ಟಿನಲ್ಲಿ ನೋಡಿದರೆ 2G ಮತ್ತು 3G ತಂತ್ರಜ್ಞಾನದ ಶೇಕಡಾ 90ರಷ್ಟು ಬೌದ್ಧಿಕ ಆಸ್ತಿ ಹಕ್ಕುಗಳನ್ನು ಅಮೆರಿಕ ಮತ್ತು ಯುರೋಪಿಯನ್ ದೇಶಗಳು ನಿಯಂತ್ರಿಸಿದ್ದವು. ಆದರೆ 5 G ತಂತ್ರಜ್ಞಾನದ ಸಂದರ್ಭದಲ್ಲಿ ವಿಶ್ಲೇಷಣೆ ಮಾಡಿದರೆ ಏಷ್ಯಾ-ಪೆಸಿಫಿಕ್ ದೇಶಗಳು, ಅದರಲ್ಲೂ ಚೀನಾ ಮತ್ತು ಕೊರಿಯಾಗಳು ಅತಿ ಹೆಚ್ಚಿನ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ತಂತ್ರಜ್ಞಾನವು ಶಕ್ತಿಕೇಂದ್ರವನ್ನು ನಿರ್ಧರಿಸುತ್ತದೆ ಎಂಬ ಹಿನ್ನೆಲೆಯಲ್ಲಿ ವಿಶ್ವದ ಶಕ್ತಿ ಸಮತೋಲನದಲ್ಲಿ ವ್ಯತ್ಯಯವಾಗುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇಂದು ಚೀನಾ ಮತ್ತು ಕೊರಿಯಾಗಳು ವಿಶ್ವದ ಹೊಸ ಶಕ್ತಿ ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ.

5G ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಗಳನ್ನು ಒಳಗೊಂಡಿರುವ ಸೈಬರ್ ಭೌತಿಕ ವ್ಯವಸ್ಥೆಯು ಮುಂದಿನ ಐದು- ಹತ್ತು ವರ್ಷಗಳಲ್ಲಿ ವಿಶ್ವದ ಶಕ್ತಿಕೇಂದ್ರವನ್ನು ನಿಯಂತ್ರಿಸಲಿವೆ. ಆದುದರಿಂದ 5G ತಂತ್ರಜ್ಞಾನದ ವಿಷಯದಲ್ಲಿ ನಮ್ಮ ದೇಶವು ಆತ್ಮನಿರ್ಭರತೆಯನ್ನು ಸಾಧಿಸುವುದು ದೇಶದ ಆರ್ಥಿಕ ಹಾಗೂ ರಕ್ಷಣಾ ಕಾರ್ಯತಂತ್ರಗಳ ದೃಷ್ಟಿಯಿಂದ ಅತ್ಯವಶ್ಯಕ.

ಪುಟ 6 ರಲ್ಲಿ ಮುಂದುವರೆದಿದೆ

# ರಾಜಕಾರಣದ ಯಶಸ್ಸಿಗೊಂದು ಮಾದರಿ

ಪುಟ 2 ರಿಂದ

ಬಿಜೆಪಿಯ ಶ್ರೀ ಮಲ್ಲಿಕಾರ್ಜುನಯ್ಯನವರು ವಿಧಾನ ಪರಿಷತ್ತಿನಲ್ಲಿ ಉಪಾಧ್ಯಕ್ಷರಾದ ಮೇಲೆ ಅವರಿಗೆ ಒಂದು ವಾಸದ ಮನೆ ಸಿಕ್ಕಿತು. ಶ್ರೀ ಮಲ್ಲಿಕಾರ್ಜುನಯ್ಯನವರು ಹತ್ತಿರದ ತುಮಕೂರಿನವರು. ಯಾವಾಗಲೂ ಕೆಲಸ ಮುಗಿಸಿಕೊಂಡು ತುಮಕೂರಿಗೆ ಹೊರಟು ಬಿಡುತ್ತಿದ್ದರು. ಹೇಗೂ ನೀವು ಈ ಮನೆಯಲ್ಲಿ ಇರೋಲ್ಲ ದಯಮಾಡಿ ಆ ಮನೆಯನ್ನು ಅವರಿಗೆ ಬಿಟ್ಟು ಕೊಡಬೇಕು ಎಂದು ಕೇಳಿಕೊಂಡಾಗ ಅವರು ಆ ಮನೆ ಬಿಟ್ಟುಕೊಟ್ಟರು, ಆ ಮನೆಯಲ್ಲಿ ಕೆಳಭಾಗದಲ್ಲಿ ಶ್ರೀ ಅನಂತಕುಮಾರ್, ಶ್ರೀಮತಿ ತೇಜಸ್ವಿನಿ ಇದ್ದರು. ಮೇಲುಗಡೆ ಶ್ರೀ ಯಡಿಯೂರಪ್ಪನವರು ಆಫೀಸ್ ಮಾಡಿಕೊಂಡಿದ್ದರು.

ಅನಂತಕುಮಾರರ ಪರಿಚಯಕ್ಕೂ ಎಷ್ಟೋ ವರ್ಷಗಳ ಮೊದಲಿನಿಂದ ನನಗೆ ಅವರ ತಾಯಿ ಗಿರಿಜಾ ಶಾಸ್ತ್ರಿಯವರ ಮನೆತನದ ಪರಿಚಯವಿದ್ದಿತು. ಅನಂತಕುಮಾರ್ ಅವರ ತಾತ ಶ್ರೀಕಂಠ ಪಂಡಿತರ ಮನೆ ಬೆಂಗಳೂರಿನ ಶೇಷಾದ್ರಿಪುರದಲ್ಲಿದೆ. ಪಂಡಿತರ ಮಕ್ಕಳಲ್ಲೊಬ್ಬರಾಗಿದ್ದ ಶ್ರೀ ಬಾಬು ನನ್ನ ಸ್ನೇಹಿತರಾಗಿದ್ದರು. ಬಹಳ ಬುದ್ಧಿವಂತ . ನಾನು ಶೇಷಾದ್ರಿಪುರಂನಲ್ಲಿ ಓದುತ್ತ ಇದ್ದಾಗ ನನ್ನ ಕ್ಲಾಸ್ಮೇಟ್ . ನಾನು ಬಾಬುವಿನ ಮನೆಗೆ ಆಗಾಗ ಹೋಗಿ ಬರುತ್ತಿದ್ದೆ. ಗೆಳೆಯರು ಕ್ರಿಕೆಟ್ ಕಾಮೆಂಟ್ರಿ ಕೇಳುವುದಕ್ಕೆ ಅವರ ಮನೆಗೆ ಹೋಗುತ್ತ ಇದ್ದುದು ಚೆನ್ನಾಗಿ ನೆನಪಿದೆ. ಹಾಗಾಗಿ ನನಗೆ ಶ್ರೀಕಂಠಪಂಡಿತರ ಪರಿಚಯವೂ ಇತ್ತು. ಗಿರಿಜಾ ಶಾಸ್ತ್ರಿಯವರು ಬಾಬುವಿನ ತಂಗಿ . ಆಗ ಅವರಿನ್ನೂ ವಿದ್ಯಾರ್ಥಿನಿಯಾಗಿದ್ದರು.

ಶ್ರೀ ಅನಂತಕುಮಾರ್ ಅವರ ತಾತ, ಅವರ ಸೋದರ ಮಾವನವರು ಎಲ್ಲರ ಪರಿಚಯವಿದ್ದ ನನಗೆ ಅನಂತಕುಮಾರ್ ಅಂಥ ದೊಡ್ಡ ಕುಟುಂಬಕ್ಕೆ ಸೇರಿದವರೆಂಬ ಅಭಿಮಾನವೂ ಉಂಟಾಗಿತ್ತು. ಹೀಗಾಗಿ ಭಾರತೀಯ ಜನತಾ ಪಾರ್ಟಿಯಲ್ಲಿ ಅವರು ಬರೀ ರಾಜ್ಯದಲ್ಲಿಯೇ ಕಾರ್ಯದರ್ಶಿಯಾಗಿದ್ದರೆ ಸಾಲದು. ರಾಷ್ಟ್ರಮಟ್ಟಕ್ಕೆ ಹೋಗಬೇಕು, ಆಗ ಇನ್ನೂ ಮಹತ್ವದ ಸಾಧನೆ ಮಾಡಬಹುದು ಎಂದು ನಾವು ಪುಸಲಾಯಿಸಿದೆವು. ಅವರು ಡೆಲ್ಲಿಗೆ ಹೋಗಿ ಶ್ರೀ ಅಡ್ವಾನಿಯವರನ್ನು ಭೇಟಿ ಮಾಡಿದರು. ಮುಂದೆ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿಯ ರಚನೆ ಮಾಡುವಾಗ ಶ್ರೀ ಯಡಿಯೂರಪ್ಪನವರ ಮುಖಾಂತರವಾಗಿ ಅನಂತಕುಮಾರ್ ಅವರಿಗೆ ಅಲ್ಲಿ ಜನರಲ್ ಸೆಕ್ರೆಟರಿಯ ಸ್ಥಾನ ಸಿಕ್ಕಿತು. ಈ ಬೆಳವಣಿಗೆಯಲ್ಲಿ ಶ್ರೀ ಯಡಿಯೂರಪ್ಪನವರ ಪಾತ್ರ ಬಹಳ ಇದೆ.

ಅಲ್ಲಿಯವರೆಗೂ ಕರ್ನಾಟಕದಿಂದ ದೆಹಲಿಯವರನ್ನು ಸಂಪರ್ಕ ಮಾಡುವ ಶಕ್ತಿ ಯಾರಿಗೂ ಇರಲಿಲ್ಲ. ನಮ್ಮ ಬಿ.ಜೆ.ಪಿ ಕಾರ್ಯಕರ್ತರಾಗಿದ್ದ ಒಬ್ಬರು ಶ್ರೀ ಹೇಮಂತ್ ಕುಮಾರ್ ಟೈಪಿಸ್ಟ್ ಆಗಿದ್ದವರು. ಅವರೊಬ್ಬರು ಮಾತ್ರವೇ ದೆಹಲಿಯನ್ನು ಸಂಪರ್ಕ ಮಾಡುವಂಥ ಸಾಮರ್ಥ್ಯವಿದ್ದವರು. ಅವರೊಬ್ಬರಿಂದ ಏನಾದೀತು, ಸರಿಯಾದಂಥ ನಾಯಕರೊಬ್ಬರು ಬೇಕು ಎಂಬ ನಿರೀಕ್ಷಣೆಯಲ್ಲಿ ನಾವು ಇದ್ದೆವು. ಅನಂತಕುಮಾರ್ ಅವರಿಗೆ ಅಲ್ಲಿ ಕಾರ್ಯದರ್ಶಿಯಾಗಿ, ಜನರಲ್ ಸೆಕ್ರೆಟರಿಯಾಗಿ ನೇಮಕವಾಗುವ ಅವಕಾಶ ಮಾಡಿದೆವು. ತಮಗೆ ದೊರೆತ ಅವಕಾಶವನ್ನು ಸದುಪಯೋಗ ಮಾಡಿಕೊಂಡ ಅವರು, ಅದಕ್ಕೆ ಸರಿಸಮಾನವಾಗಿ ಇತರ ರಾಜ್ಯಗಳಲ್ಲಿ ಪಕ್ಷದ ಜವಾಬ್ದಾರಿ ತೆಗೆದುಕೊಂಡು ಚುನಾವಣೆಗಳಲ್ಲಿ ಮಹತ್ತ್ವದ ಕೆಲಸ ಮಾಡಿದರು.

ಒಂದು ಸಾಧಾರಣ ಸ್ಥಿತಿಯಿಂದ ಉನ್ನತ ಮಟ್ಟಕ್ಕೆ ಏರಬೇಕೆಂದರೆ ಅನಂತಕುಮಾರರ ಚಾಣಾಕ್ಷತೆ, ಬುದ್ಧಿವಂತಿಕೆ, ರಾಷ್ಟ್ರಪ್ರೇಮ, ಜನತೆಯ ಮೇಲಿನ ಪ್ರೇಮ, ಸಾಹಸಶೀಲತೆ ಎಲ್ಲವೂ ಸೇರಿವೆ. ಅನಂತಕುಮಾರರಿಗೆ ಜನರ ಬಗೆಗಿನ




ಪ್ರೀತಿಯೂ ಗಮನಾರ್ಹವಾದದ್ದು. ಇವರಿಗೆ ಚಿಕ್ಕಂದಿನಿಂದಲೂ ಬಡವರ ಮೇಲೆ ತುಂಬ ಅನುಕಂಪ ಇತ್ತು ಎಂಬುದನ್ನು ಕೇಳಿ ಬಲ್ಲೆ. ಅವರು ವಿದ್ಯಾರ್ಥಿ ದೆಸೆಯಲ್ಲಿಯಲ್ಲಿದ್ದಾಗ ಒಮ್ಮೆ ಹುಬ್ಬಳ್ಳಿಯಲ್ಲಿ ರಾತ್ರಿ ಸಂಚಾರ ಮಾಡುತ್ತ ಇದ್ದರು. ಹೋಗುವಾಗ ಬೀದಿಯೊಳಗೆ ಯಾವನೋ ಒಬ್ಬ ಚಳಿ ಚಳಿ ಅಂತ ಮಲಗಿದ್ದನಂತೆ . ನೋಡಿದರೆ, ತೀರಾ ವಯಸ್ಸಾದ ಮುದುಕ. ಅನಂತಕುಮಾರ್ ಒಂದು ಶಾಲು ಹೊದೆದುಕೊಂಡು ಹೋಗುತ್ತಿದ್ದವರು, ಆ ಶಾಲನ್ನು ಅವನ ಮೇಲೆ ಹಾಕಿ ಹಾಗೇ ಬಂದು ಬಿಟ್ಟರಂತೆ. ಬಡವರ ಬಗ್ಗೆ ಅವರಿಗೆ ಇದ್ದಂಥ ಅಷ್ಟು ಕಾಳಜಿ ಮುಂದೆ ಅವರಿಗೆ ರಾಷ್ಟ್ರದ ಸೇವೆ ಮಾಡುವಂತಹ ಒಂದು ಅವಕಾಶ ಕಲ್ಪಿಸಿತು. ಆ ಸೇವೆಯನ್ನು ಅವರು ಸಮರ್ಥವಾಗಿ ನೆರವೇರಿಸಿದರು.

ಅನಂತಕುಮಾರ್ ಕ್ರಮಿಸಿದ ಪಥಗಳು ಅನಂತ. ಅನೇಕ ಪಥಗಳಲ್ಲಿ ಅಷ್ಟು ದಾರಿಗಳಲ್ಲಿ ರಾಜಕೀಯಪಥ, ವಿದ್ಯಾರ್ಥಿಪಥ, ಸ್ನೇಹಿತರ ಪಥ, ಎಮರ್ಜೆನ್ಸಿ ಸಂದರ್ಭದಲ್ಲಿ ಹೋರಾಟ ಮಾಡಿದಂಥ ಪಥ, ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಬಾವುಟ ಹಾರಿಸಿದ ಒಂದು ಪಥ - ಹೀಗೆ, ಅನೇಕ ಪಥಗಳಲ್ಲಿ ಅವರು ಕೆಲಸ ಮಾಡಿದ್ದಾರೆ ಅವರನ್ನು ನೆನೆಸಿಕೊಳ್ಳಬೇಕಾದದ್ದು ಒಳ್ಳೆಯದು. ನಿನ್ನೆ ಶ್ರೀರಾಮ ಚಂದ್ರನ ನವಮಿಯಾಗಿದೆ. ಇವತ್ತು ದಶಮಿ ೨೨ನೇ ತಾರೀಖು ಅವರ ನೆನಪಿನ ಪತ್ರಿಕೆಯನ್ನು ಬಿಡುಗಡೆ ಮಾಡುವುದಕ್ಕೋಸ್ಕರವಾಗಿ ನಾನು ನಿಮ್ಮ ಬಳಿಗೆ ಬಂದಿದ್ದೇನೆ. ಅನಂತಪಥ ಪತ್ರಿಕೆಯನ್ನು ಬಿಡುಗಡೆ ಮಾಡುವ ನೆಪದಲ್ಲಿ ಅವರನ್ನು ಮನಸ್ಸಿನ ತುಂಬ ನೆನೆಸಿಕೊಳ್ಳುತ್ತ ಇದ್ದೇನೆ. ಅನಂತ ಕುಮಾರ್ ಅವರ ಶ್ರೀಮತಿ ತೇಜಸ್ವಿನಿಯವರು ಕೂಡ ಅವರಿಗೆ ಸರಿಸಮಾನವಾಗಿ ಸೇವಾಕಾರ್ಯ ಮಾಡಿಕೊಂಡು ಬರುತ್ತಿದ್ದಾರೆ. ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು.

# 5G ತಂತ್ರಜ್ಞಾನದ ಅವಕಾಶಗಳು

ಪುಟ 5 ರಿಂದ

## 5G ತಂತ್ರಜ್ಞಾನದ ಮಹತ್ವ

5G ತಂತ್ರಜ್ಞಾನದಿಂದ ಪ್ರತಿ ಸೆಕೆಂಡಿಗೆ 20 gbps ನಷ್ಟು ಅತ್ಯಧಿಕ ವೇಗದ ದರದಲ್ಲಿ ಸಾಧನಗಳು ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಬಳಕೆದಾರನಿಗೂ 100 mbps ದರದಲ್ಲಿ ಬಳಕೆಯ ಅವಕಾಶ ದೊರೆಯುತ್ತದೆ. ಹೆಚ್ಚಿನ ಸ್ಪೆಕ್ಟ್ರಂ ಸಾಮರ್ಥ್ಯ ಹೊಂದಿರುವ ಈ ತಂತ್ರಜ್ಞಾನದಿಂದ ಮಾಹಿತಿಗಳನ್ನು ಮೂಲ ಆಕರಗಳಿಂದ ಕೇವಲ ನಾಲ್ಕು ಮಿಲ್ಲಿಸೆಕೆಂಡುಗಳಲ್ಲಿ ಇಳಿಸಿಕೊಳ್ಳಬಹುದು ಎಂದರೆ ಇದರ ಅಗಾಧ ಸಾಮರ್ಥ್ಯವನ್ನು ಊಹಿಸಿಕೊಳ್ಳಬಹುದು. 5G ತಂತ್ರಜ್ಞಾನದಿಂದ ಯಂತ್ರಾಂಶಗಳ (Hardware) ಮೇಲಿನ ಅವಲಂಬನೆ ಮತ್ತು ಅವುಗಳ ಗಾತ್ರ ತುಂಬಾ ಕಡಿಮೆಯಾಗಲಿದೆ. ಅನೇಕ ಸಂಖ್ಯೆಯ ಸಾಧನಗಳನ್ನು ಅತ್ಯಂತ ಕಡಿಮೆ ಸ್ಥಳದಲ್ಲಿ ಸ್ಥಾಪಿಸಬಹುದು; ಹಾಗೂ, ಅನೇಕ ಸಾಧನಗಳ ನಡುವೆ ಏಕ ಕಾಲದಲ್ಲಿ ಸಂಪರ್ಕವನ್ನು ಸ್ಥಾಪಿಸಬಹುದು.

5 G ತಂತ್ರಜ್ಞಾನದ ಕಾರ್ಯವ್ಯಾಪ್ತಿ ಮತ್ತು ಕ್ಷಮತೆಯನ್ನು ಗಮನಿಸಿದರೆ ಇದನ್ನು "ನಿಸ್ತಂತು ಫೈಬರ್" ಎಂದೂ ಪರಿಗಣಿಸಬಹುದು. ಇದು ಕೇವಲ ಕರೆಮಾಡಲು ಅಥವಾ ಅಂತರ್ಜಾಲ ತಾಣಗಳನ್ನು ಜಾಲಾಡಲು ಮಾತ್ರ ಬಳಕೆಯಾಗುವುದಲ್ಲ, ಇದು ದೇಶದ, ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿಯೂ ತನ್ನ ಛಾಪನ್ನು ಮೂಡಿಸಲಿದೆ. ಆರೋಗ್ಯ, ಸಂಚಾರ, ಕೃಷಿ, ಶಿಕ್ಷಣ ಮೊದಲಾದ ಹಲವು ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ಇದನ್ನು ಬಳಸಿಕೊಳ್ಳಬಹುದು. ಒಂದೇ ಸಾಧನದ ಮೂಲಕ ಗಣಕ ಮತ್ತು ಸಂವಹನಗಳೆರಡನ್ನೂ ಏಕಕಾಲದಲ್ಲಿ ಮಾಡುವುದು ಈ ತಂತ್ರಜ್ಞಾನದಿಂದ ಸಾಧ್ಯ.

## 5G ತಂತ್ರಜ್ಞಾನ ಮತ್ತು ಭಾರತ

5 G ತಂತ್ರಜ್ಞಾನದಿಂದ ಯಂತ್ರಾಂಶಗಳಿಗಿಂತ ಹೆಚ್ಚಾಗಿ ತಂತ್ರಾಂಶಗಳ ಮೇಲೆ ಅವಲಂಬನೆ ಉಂಟಾಗುತ್ತದೆ. ನೆಟ್ವರ್ಕ್‌ಗಳನ್ನು ಸರಕುಗಳಂತೆ ಪರಿಗಣಿಸಲಾಗುತ್ತದೆ. ಕ್ಲೌಡ್, ಫಾಗ್ ಮುಂತಾದ ವಿಶೇಷ ತಂತ್ರಜ್ಞಾನಗಳ ಬಳಕೆ ಅಧಿಕವಾಗುತ್ತದೆ. 2G, 3G ಮತ್ತು 4G ಗಳಿಗೆ ಯಂತ್ರಾಂಶ ಪರಿಣತರ ಅಗತ್ಯ ಹೆಚ್ಚಾಗಿದ್ದರೆ 5G ತಂತ್ರಜ್ಞಾನದಲ್ಲಿ ಎಲ್ಲವೂ ತಂತ್ರಾಂಶ ಆಧಾರಿತವಾಗಿರುವುದರಿಂದ ವಿಶೇಷ ಜ್ಞಾನವನ್ನು ಮತ್ತು ಕುಶಲತೆಯನ್ನು ಹೊಂದಿದ ಉದ್ಯೋಗಿಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಇದರಿಂದಾಗಿ ಭಾರತದ ಉದ್ಯೋಗಿಗಳು ವಿಶ್ವಮಟ್ಟದಲ್ಲಿ ಬೇಡಿಕೆಯಲ್ಲಿರುತ್ತಾರೆ.

ಭಾರತವು ವಿಶ್ವದ ಎರಡನೇ ಅತಿದೊಡ್ಡ ದೂರಸಂಪರ್ಕ ಮಾರುಕಟ್ಟೆಯಾಗಿದ್ದರೂ ಇದುವರೆಗೆ ಈ ಕ್ಷೇತ್ರದಲ್ಲಿ ಭಾರತೀಯರ ಹೆಜ್ಜೆಗುರುತು ಅತಿ ಕಡಿಮೆ. ಭಾರತೀಯರ ಸ್ವಾಮಿತ್ವದಲ್ಲಿ ಯಾವುದೇ ಬೌದ್ಧಿಕ ಆಸ್ತಿ ಹಕ್ಕುಗಳು ಇಲ್ಲವೇ ಇಲ್ಲವೆಂಬಷ್ಟು ಕಡಿಮೆಯಾಗಿವೆ. 2G, 3G ಮತ್ತು 4G ಗಳಲ್ಲಿ ಭಾರತದ ಕೊಡುಗೆ ಏನೇನೂ ಇರಲಿಲ್ಲವೆನ್ನಬಹುದು. 2014 ರ ವರೆಗೆ ಭಾರತೀಯ ಕಂಪನಿಗಳ ವಶದಲ್ಲಿ ಯಾವ ಬೌದ್ಧಿಕ ಆಸ್ತಿ ಹಕ್ಕುಗಳೂ ಇರಲಿಲ್ಲ. ಯಾವುದೇ ಹೊಸ ತಂತ್ರಜ್ಞಾನವಿರಲಿ, ಉತ್ಪಾದನಾ ಘಟಕಗಳನ್ನು ಕೂಡ ಭಾರತದ ಕಂಪನಿಗಳು ಹೊಂದಿರಲಿಲ್ಲ. 2G, 3G ಮತ್ತು 4G ತಂತ್ರಜ್ಞಾನಗಳು ಯಂತ್ರಾಂಶಗಳನ್ನು ಅವಲಂಬಿಸಿದ್ದರೆ 5 G ತಂತ್ರಜ್ಞಾನವು ವಿಶ್ವ ಮಟ್ಟದಲ್ಲಿ ಪ್ರಮಾಣಿತ ತಂತ್ರಾಂಶಗಳ ಗುಣಮಟ್ಟವನ್ನು ಅವಲಂಬಿಸಿರುತ್ತದೆ.

ಸರಕಾರಗಳ ಉದಾಸೀನತೆಯಿಂದಾಗಿ 2014 ರ ವರೆಗೆ ನಮ್ಮ ದೇಶದಲ್ಲಿ ಗುಣಮಟ್ಟದ ಪ್ರಮಾಣೀಕರಣ ವ್ಯವಸ್ಥೆಯೂ ಇರಲಿಲ್ಲ. ವಿಶ್ವದ ಎರಡನೇ ಅತಿದೊಡ್ಡ ದೂರಸಂಚಾರ ಮಾರುಕಟ್ಟೆಯಾದ ಭಾರತದಲ್ಲಿ ಮೊತ್ತ ಮೊದಲ ಪ್ರಮಾಣೀಕರಣ ಸಂಸ್ಥೆ TSDSI (Telecommunications Standards Development Society) ಪ್ರಾರಂಭವಾದದ್ದು 2015ರಲ್ಲಿ. ಅಲ್ಲಿಂದೀಚೆಗಿನ ಐದಾರು ವರ್ಷಗಳಲ್ಲಿ ಭಾರತೀಯರ ಹೆಜ್ಜೆಗುರುತುಗಳು ವಿಶ್ವಮಟ್ಟದಲ್ಲಿ ಮೂಡಲಾರಂಭಿಸಿವೆ.

## TSDSI ಸಂಸ್ಥೆಯ ಪಾತ್ರ

T S D S I ಸಂಸ್ಥೆಯು ಭಾರತಕ್ಕೇ ವಿಶಿಷ್ಟವಾದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದು, ಪ್ರಚಾರ ಮಾಡುವುದು ಮತ್ತು ಪ್ರಮಾಣೀಕರಿಸುವುದರ ಕಡೆಗೆ ಆದ್ಯ ಗಮನವನ್ನು ಹರಿಸಿದೆ. ಈ ದಿಸೆಯಲ್ಲಿ ಲೋ ಮೊಬಿಲಿಟಿ ಲಾರ್ಜ್ ಸೆಲ್ (LMLC) ಪರಿಕಲ್ಪನೆಯನ್ನು ಸಾಕಾರಗೊಳಿಸಿ ಅದಕ್ಕೆ ವಿಶ್ವ ಪ್ರಮಾಣೀಕರಣ ಸಂಸ್ಥೆಗಳ ಅನುಮತಿಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಪರಿಕಲ್ಪನೆಯನ್ನು ಭಾರತದ ವಿಶಾಲವಾದ ಗ್ರಾಮೀಣ ಪ್ರದೇಶಗಳನ್ನು ಗಮನದಲ್ಲಿರಿಸಿಕೊಂಡು ರೂಪಿಸಲಾಗಿದೆ. 5G ತಂತ್ರಜ್ಞಾನವು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು ಅನೇಕ ಸಾಧನಗಳ ನಡುವೆ ಏಕಕಾಲದಲ್ಲಿ ಪರಸ್ಪರ ಕಾರ್ಯಸಾಧ್ಯತೆ ಹೊಂದಿರುವುದರಿಂದ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಳ್ಳಿಗಳಿಗೂ ಈ ಸೌಲಭ್ಯವನ್ನು ವಿಸ್ತರಿಸುವುದು ಅಗತ್ಯ. ನಗರಗಳಲ್ಲಿ ಅಗತ್ಯವಿರುವಷ್ಟು ಸಾಮರ್ಥ್ಯದ ಅಂತರ್ಜಾಲ ಸೌಲಭ್ಯ ಹಳ್ಳಿಗಳಿಗೆ ಬೇಕಾಗುವುದಿಲ್ಲ. ಅತಿ ಹೆಚ್ಚು ಭಾಗವನ್ನು ತಲುಪುವ ಕಡಿಮೆ ವೆಚ್ಚದ ತಂತ್ರಜ್ಞಾನವು ಭಾರತದ ಸಂದರ್ಭದಲ್ಲಿ ತುಂಬ ಉಪಯುಕ್ತ.

5G ತಂತ್ರಜ್ಞಾನ ಕ್ಷೇತ್ರದಲ್ಲಿ ಇದೀಗ ಕಾಲಿಡುತ್ತಿರುವ ಭಾರತವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ವಿಶ್ವಮಾನಕಗಳ ನಿರ್ಣಯದಲ್ಲಿ ಭಾರತೀಯರ ಪಾತ್ರ ತೀರ ಕಡಿಮೆ. ಇದರ ಜೊತೆಗೆ ಹೆಚ್ಚಿನ ಬೌದ್ಧಿಕ ಆಸ್ತಿ ಹಕ್ಕು ಮತ್ತು ಸನ್ನದುಗಳೂ ಭಾರತದ ವಶದಲ್ಲಿಲ್ಲ. ಭಾರತದಲ್ಲಿ ಉತ್ಪಾದನಾ ಘಟಕಗಳ ಸಂಖ್ಯೆಯೂ ಅತಿ ಕಡಿಮೆ. ಭಾರತದ ಬೌದ್ಧಿಕ ಕ್ಷೇತ್ರ ಮತ್ತು ಉದ್ಯಮಗಳ ನಡುವೆ ಸರಿಯಾದ ಸಂವಹನ ನಡೆಯುತ್ತಿಲ್ಲ. ಚೀನಾ ದೇಶವು 5G ತಂತ್ರಜ್ಞಾನದ ವಿಷಯದಲ್ಲಿ ಅಮೆರಿಕಕ್ಕೆ ತೀವ್ರ ಸ್ಪರ್ಧೆಯನ್ನು ನೀಡುತ್ತಿದೆ. ಆದರೆ ಭಾರತದ ಸಾಧನೆ ಈ ವಿಷಯದಲ್ಲಿ ಇನ್ನೂ ಗೌಣವಾಗಿಯೇ ಇದೆ.

## ನಿರ್ಲಕ್ಷ್ಯದಿಂದ ಅಪಾಯ

ಈ ಪರಿಸ್ಥಿತಿಯು ನಮ್ಮ ಮುಂದೆ ಹಲವಾರು ಸಮಸ್ಯೆಗಳನ್ನು ಪ್ರಕ್ಷೇಪಿಸುತ್ತಿದೆ. 5G ತಂತ್ರಜ್ಞಾನವು ಮುಂಬರುವ ದಿನಗಳಲ್ಲಿ ಭಾರತದ ಆರ್ಥಿಕ ಬೆಳವಣಿಗೆಯ ಮೇಲೆ ಅಪಾರ ಪರಿಣಾಮವನ್ನು ಬೀರುವುದು ಖಚಿತ. ಇದಕ್ಕಿಂತ ಹೆಚ್ಚಾಗಿ ಎಲ್ಲ ಸೈಬರ್ ಭೌತಿಕ ಸಾಧನಗಳನ್ನು ವಿದೇಶಗಳಿಂದ ಆಮದು ಮಾಡಿಕೊಂಡ ತಂತ್ರಜ್ಞಾನದ ಮೇಲೆಯೇ ನಿರ್ಮಿಸಿಕೊಳ್ಳತೊಡಗಿದರೆ, ಅದು ದೇಶದ ರಕ್ಷಣಾ ವ್ಯವಸ್ಥೆಗೆ ಅಪಾಯ ತಂದೊಡ್ಡುವ ಸಂಭವವಿದೆ.

## ಮುಂದಿನ ದಿನಗಳಲ್ಲಿ

ಇದುವರೆಗೆ 2G ಯಿಂದ 4G ವರೆಗಿನ ತಂತ್ರಜ್ಞಾನಗಳು ಒದಗಿಸಿದ ಅವಕಾಶಗಳನ್ನು ನಾವು ಕಳೆದುಕೊಂಡಿದ್ದೆವು. 5 G ತಂತ್ರಜ್ಞಾನವು ಇದೀಗ ನಮಗೆ ಒದಗಿಸಿರುವ ಅವಕಾಶಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸೂಕ್ತ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿದೆ.ಈಗಾಗಲೇ ಇದಕ್ಕೊಂದು ಕಾರ್ಯತಂತ್ರ ಸಿದ್ಧವಾಗಿದೆ. ದೇಶದ ಉನ್ನತ ಸಂಸ್ಥೆಗಳಾದ ಐಐಟಿ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಇಂದು ದೇಶದ ಎಲ್ಲ ಸಂಸ್ಥೆಗಳ ನಡುವೆ ಪರಸ್ಪರ ಸಹಯೋಗದಿಂದ ಸಂಶೋಧನಾ ಕಾರ್ಯ ನಡೆಯಬೇಕಾಗಿದೆ. ಬೌದ್ಧಿಕ ಆಸ್ತಿ ಹಕ್ಕುಗಳ ವಿಚಾರದಲ್ಲಿ ಅನೇಕ ಸಂಶೋಧನೆಗಳು ನಡೆಯುತ್ತಿವೆ. ನಮ್ಮ ದೇಶದ ಒಟ್ಟು ಸಾಮರ್ಥ್ಯದಲ್ಲಿ ವೃದ್ಧಿಯಾಗುತ್ತಿದೆ.

ಇಂದು ಜಗತ್ತಿನ ಪ್ರಮಾಣನ ವ್ಯವಸ್ಥೆಗೆ ಹೆಬ್ಬಾಗಿಲಿನಂತೆ TSDSI ಸಂಸ್ಥೆ ಕೆಲಸ ಮಾಡುತ್ತಿದೆ. ಈ ಸಂಸ್ಥೆಯನ್ನು ಬಳಸಿಕೊಂಡು ವಿಶ್ವ ರಂಗದಲ್ಲಿ ನಮ್ಮ ಭಾಗವಹಿಸುವಿಕೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ನಮ್ಮ ದೇಶದ ಸಂಶೋಧನಾ ಸಂಸ್ಥೆಗಳಲ್ಲಿ ಪರಸ್ಪರ ಸಹಯೋಗದ ಅಗತ್ಯವಿದೆ. ಉತ್ಪಾದಕ ಕಂಪನಿಗಳು ತಮ್ಮಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗವನ್ನು ಸ್ಥಾಪಿಸಿಕೊಂಡು ಪೋಷಿಸಬೇಕು. ನಮ್ಮ ದೇಶದಲ್ಲಿ ಉತ್ತಮ ಶ್ರೇಣಿಯ ಬೌದ್ಧಿಕ ಆಸ್ತಿ ಹಕ್ಕುಗಳ ಸಂಖ್ಯೆ ಅಧಿಕವಾಗಬೇಕು. ಹೊಸ ಆವಿಷ್ಕಾರಗಳು ನಡೆಯಬೇಕು. ಈ ನಿಟ್ಟಿನಲ್ಲಿ ದೇಶದ " ಮೇಕ್ ಇನ್ ಇಂಡಿಯಾ" ಕಾರ್ಯಕ್ರಮಕ್ಕೆ 5G ತಂತ್ರಜ್ಞಾನವು ಹೆಚ್ಚಿನ ಒತ್ತಾಸೆ ನೀಡಬಲ್ಲದು. 5G ತಂತ್ರಜ್ಞಾನದಲ್ಲಿ ತಂತ್ರಾಂಶಗಳ ಬಳಕೆಯ ಪ್ರಮಾಣ ಅಧಿಕವಾಗಿರುವುದರಿಂದ ತಂತ್ರಾಂಶಗಳ ಅಭಿವೃದ್ಧಿಗೆ ನಮ್ಮ ದೇಶದ ಸ್ಟಾರ್ಟಪ್ ಕಂಪನಿಗಳು ಸಿದ್ಧವಾಗಬೇಕಿದೆ. ವಿಶ್ವಮಟ್ಟದಲ್ಲಿ ಬಳಕೆಯಾಗುವ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವ ಅವಕಾಶ ಭಾರತಕ್ಕೆ ಒದಗಿ ಬಂದಿದೆ.

ಈ ದಿಸೆಯಲ್ಲಿ ಸರಕಾರಗಳು ಸ್ಟಾರ್ಟಪ್ ಯೋಜನೆಗಳನ್ನು ಪ್ರೋತ್ಸಾಹಿಸಬೇಕು. ಇವು ಅಭಿವೃದ್ಧಿ ಪಡಿಸಿದ ತಂತ್ರಾಂಶಗಳ ವಾಣಿಜ್ಯೀಕರಣಕ್ಕೆ ಸರಕಾರ ಸಹಾಯ ಮಾಡಬೇಕು. ಭಾರತದ ಸಂದರ್ಭದಲ್ಲಿ ಕನಿಷ್ಟ ವೆಚ್ಚದ ತಂತ್ರಜ್ಞಾನ, ಬ್ರಾಡ್ ಬ್ಯಾಂಡಿನಷ್ಟು ಸಾಮರ್ಥ್ಯದ ನಿಸ್ತಂತು ವ್ಯವಸ್ಥೆ, ಕಡಿಮೆ ಇಂಧನ ಬಳಸುವ ಸಾಧನಗಳು, ಸ್ಥಾವರಗಳು, ಪರವಾನಿಗೆ ಬೇಕಿಲ್ಲದ ಸ್ಪೆಕ್ಟ್ರಮ್ ಬಳಕೆಯ ಅನುಕೂಲ ಮುಂತಾದ ವಿಷಯಗಳು ಪ್ರಮುಖವಾಗಿವೆ. ಹಳ್ಳಿಗಳೇ ಅಧಿಕವಾಗಿರುವ ಭಾರತದಂತಹ ವಿಶಾಲವಾದ ದೇಶಗಳಿಗೆ ಪ್ರಯೋಜನಕಾರಿಯಾಗಿರುವ ಹೊಸ ಪ್ರಮಾಣವೊಂದಕ್ಕೆ TSDSI ಸಂಸ್ಥೆಯು ವಿಶ್ವ ಪ್ರಮಾಣನ ಸಂಸ್ಥೆಗಳಿಂದ ಒಪ್ಪಿಗೆ ಪಡೆದಿದೆ. ಇದೊಂದು ಮಹತ್ತರವಾದ ಬೆಳವಣಿಗೆ. 5G ತಂತ್ರಜ್ಞಾನವು ತೆರೆದಿರಿಸಿರುವ ಸುವರ್ಣಾವಕಾಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುವ ತಂತ್ರಜ್ಞಾನ ಅಭಿವೃದ್ಧಿ, ಉತ್ಪಾದನೆ, ಬಳಕೆ, ಸ್ಪೆಕ್ಟ್ರಂ ನೀತಿ, ನಿಯಂತ್ರಕ ನೀತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳ ಕಡೆಗೆ ಗಮನ ಹರಿಸಲಾಗುತ್ತಿದೆ. ಸರಕಾರವು ತನ್ನ "ಸುಗಮ ವ್ಯವಹಾರ" ನೀತಿಯ ಅಡಿಯಲ್ಲಿ 5G ಸಂಶೋಧನೆಗಳಿಗೆ ಬೇಕಾದ ಅನುಮತಿ ಪ್ರಕ್ರಿಯೆಯನ್ನು ಮತ್ತು ಸಂಶೋಧನೆ ಮತ್ತು ಪ್ರಾಯೋಗಿಕ ಬಳಕೆಯ ಪ್ರಕ್ರಿಯೆಗಳನ್ನು ಸರಳಗೊಳಿಸಿದೆ. ದೇಶದ ಹೊಸ ನೀತಿಯನ್ನು ಪ್ರಯೋಗ, ಸಂಶೋಧನೆ, ಅನುಸಂಧಾನ ಮತ್ತು 5 G ತಂತ್ರಜ್ಞಾನದ ಉತ್ಪನ್ನಗಳ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ನಿರೂಪಿಸಲಾಗಿದೆ. ಹೀಗಾಗಿ, 5G ತಂತ್ರಜ್ಞಾನದ ಸವಾಲುಗಳನ್ನು ಎದುರಿಸಲು ಭಾರತವು ಸನ್ನದ್ಧವಾಗಿದೆ ಎಂದು ಹೇಳಬಹುದು.



**ಪ್ರೊ. ಅಭಯ ಕರಂದಿಕರ**
ನಿರ್ದೇಶಕರು, ಐ ಐ ಟಿ, ಕಾನ್ಪುರ

ನೆನಪಿನ ಅಂಗಳದಿಂದ

# ನಾನು ಕಂಡ ಬಾಲಕ ಅನಂತ್

**ಮೋಹನ ರಾಜ್ ಸಾತುವಳ್ಳಿ**
ಪ್ರಾಧ್ಯಾಪಕರು (ನಿವೃತ್ತ), ಇಂಗ್ಲಿಶ್ ಮತ್ತು ಅನ್ಯದೇಶೀಯ ಭಾಷಾ ವಿಶ್ವವಿದ್ಯಾನಿಲಯ, ಹೈದರಾಬಾದ್

ಏಪ್ರಿಲ್ 1959ರಲ್ಲಿ ರಾಯಚೂರು ಜಿಲ್ಲೆಯ ಲಿಂಗಸುಗೂರಿನಿಂದ ನಮ್ಮ ತಾತನವರ ಮನೆಯಲ್ಲಿ ವಾಸಿಸಲು ಮೈಸೂರಿಗೆ ಬಂದೆ. ಆಗ ನನಗಿನ್ನೂ ಎಂಟು ವರ್ಷ. ನನ್ನ ತಾತ ಶ್ರೀ ನರಹರಿ ಶಾಸ್ತ್ರಿ ಮೈಸೂರಿನ ಪ್ರಸಿದ್ಧ ಜ್ಯೋತಿಷಿಗಳಾಗಿದ್ದರು. ಅವರಿಂದ ಸಲಹೆ ಪಡೆಯಲು ಹಾಗೂ ಜ್ಯೋತಿಷ್ಯ ಕೇಳಲು ಬಹಳ ಮಂದಿ ಅವರ ಬಳಿ ಬರುತ್ತಿದ್ದರು.

ನರಹರಿ ಶಾಸ್ತ್ರಿಯವರ ದೊಡ್ಡ ಮಗ ಶ್ರೀ ನಾರಾಯಣ ಶಾಸ್ತ್ರಿ ನನ್ನ ಸೋದರಮಾವ. ಅವರನ್ನು ನಾಣಿ ಮಾಮು ಎಂದೇ ನಾವೆಲ್ಲ ಕರೆಯುತ್ತಿದ್ದೆವು. ಅವರ ಮೊದಲನೆಯ ಮಗ ಅದೇ ವರ್ಷದ (೧೯೫೯) ಸೆಪ್ಟಂಬರ್ ತಿಂಗಳಲ್ಲಿ ಜನಿಸಿದ. ಈ ಮಗು ಇತರ ಮಕ್ಕಳಿಗಿಂತ ಹೆಚ್ಚು ಬೆಳವಣಿಗೆ ಹೊಂದಿ ಆರೋಗ್ಯಪೂರ್ಣವಾಗಿತ್ತು. . ಸಣ್ಣ ಹುಡುಗನಾಗಿದ್ದ ನನ್ನನ್ನು ಈ ಮಗು ಬಹಳ ಆಕರ್ಷಿಸಿತ್ತು. ಈ ಮಗುವೇ ಮುಂದೆ ಮಂತ್ರಿಯೂ ಆಗಿ ಪ್ರಸಿದ್ಧರ ಸಾಲಿಗೆ ಸೇರಿದ ಅನಂತ ಕುಮಾರ್.

ಶೈಶವದಲ್ಲಿಯೇ ಆತನ ಬೆಳವಣಿಗೆ ಉತ್ತಮವಾಗಿತ್ತು. ಅವನಿಗೆ ಒಂದು ವರ್ಷ ಕಳೆಯುತ್ತಿದ್ದಂತೆ ನಾಣಿ ಮಾಮನಿಗೆ ಹುಬ್ಬಳ್ಳಿಯಲ್ಲಿ ಹೊಸದಾಗಿ ಸ್ಥಾಪಿಸಲಾದ ದಕ್ಷಿಣ ರೈಲ್ವೆ ವಿಭಾಗಕ್ಕೆ ವರ್ಗವಾಯಿತು. ಹೀಗಾಗಿ, ಬಹಳ ತುಂಟನಾಗಿದ್ದ, ಹರಟೆಮಲ್ಲನಾಗಿದ್ದ ಅನಂತಕುಮಾರನ ಬಾಲ್ಯದ ಚಟುವಟಿಕೆಗಳನ್ನು ನೋಡಿ ಆನಂದಿಸುವ ಅವಕಾಶ ನನಗೆ ತಪ್ಪಿದಂತಾಯಿತು.

ನಾಣಿ ಮಾಮು ರೈಲ್ವೆಯಲ್ಲಿದ್ದುದರಿಂದ ವರ್ಷಕ್ಕೊಮ್ಮೆ ಮೈಸೂರಿಗೆ ಬರುತ್ತಿದ್ದರು. ಆಗ ನಾನು ಅನಂತನೊಡನೆ ಸ್ವಲ್ಪ ಸಮಯ ಕಳೆಯುತ್ತಿದ್ದೆ. ಅಲ್ಪಕಾಲದ ಭೇಟಿಗಾಗಿ ಮೈಸೂರಿಗೆ ಬಂದಾಗ ಅವನನ್ನು ನೋಡಿಕೊಳ್ಳುವುದು ಹಾಗೂ ಅವನೊಡನೆ ಆಟವಾಡುವುದು ನನ್ನ ಕರ್ತವ್ಯವಾಗಿತ್ತು. ಪಾರ್ಕಿನಲ್ಲಿ ಓಡಾಟ, ಕಣ್ಣಾಮುಚ್ಚಾಲೆ ಆಟ, ತೂಗುಮಣೆ ಅಥವಾ ಜೋಕಾಲಿ , ಜಾರುಬಂಡೆಯಿಂದ ಜಾರುವುದೇ ಮೊದಲಾದ ಆಟಗಳನ್ನು ಆಡಿಸಲು ನಾನು ಅವನನ್ನು ಹತ್ತಿರದಲ್ಲಿದ್ದ ಗಣೇಶ ಪಾರ್ಕ್ ಇಲ್ಲವೇ ನ್ಯಾಯಾಲಯದ ಬಳಿ ಇದ್ದ ಮನುವನ ಪಾರ್ಕಿಗೆ ಕರೆದೊಯ್ಯುತ್ತಿದ್ದೆ. ಪಾರ್ಕಿನಲ್ಲಿದ್ದ ಇತರ ಹುಡುಗರೂ ನಮ್ಮೊಡನೆ ಸೇರುತ್ತಿದ್ದರು. ನಿಜಕ್ಕೂ ಆ ದಿನಗಳು ಬಹಳ ಸಂತೋಷದ ದಿನಗಳಾಗಿದ್ದವು.

ಆ ವಯಸ್ಸಿನಲ್ಲಿಯೇ ಅನಂತನಿಗೆ ತಿನಿಸುಗಳೆಂದರೆ ಬಲು ಇಷ್ಟ. ಪಾರ್ಕಿನಲ್ಲಿ ಹುಡುಗರು ಮಾರುತ್ತಿದ್ದ ಚಿಕ್ಕಿಯನ್ನೋ ಅಥವಾ ಹುರಿದ ಕಡಲೆಕಾಯಿ ಬೀಜವನ್ನೋ ತಿನ್ನಲು ಕೊಡಿಸು ಎನ್ನುತ್ತಿದ್ದ. ಏನನ್ನಾದರೂ ಕೊಡಿಸೋಣವೆಂದರೆ ನನ್ನ ಹತ್ತಿರ ಹಣವಿದ್ದರಲ್ಲವೆ? ಅಳಲು ತೊಡಗುತ್ತಿದ್ದ ಅವನನ್ನು ಹೇಗಾದರೂ ಸಮಾಧಾನಪಡಿಸಿ ಮನೆಗೆ ಕರೆದುಕೊಂಡು ಬರಬೇಕಾಗಿತ್ತು. ಮನೆಗೆ ಬಂದ ಮೇಲೆ ನಮ್ಮ ಅಜ್ಜಿ ಕೊಡುತ್ತಿದ್ದ ಕೊಬ್ಬರಿ ಬೆಲ್ಲದಿಂದಲೋ ಕೊಬ್ಬರಿ ಮಿಠಾಯಿಯಿಂದಲೋ ನಮ್ಮಿಬ್ಬರಿಗೂ ಬಹಳ ಸಂತೋಷವಾಗುತ್ತಿತ್ತು.

ಈ ತೆರನಾದ ಒಡನಾಟ ಒಟ್ಟಾರೆ ಬಹಳ ಕಡಿಮೆ ಅವಧಿಯದಾಗಿದ್ದರೂ ಬಹಳ ಆಪ್ಯಾಯಮಾನವಾಗಿದ್ದ ಕಾಲ. ಅನಂತಕುಮಾರನ ತಂಗಿ ಸುವಾಸಿನಿ ಹುಟ್ಟಿದಾಗ, ಅನಂತನಿಗೆ ನಾಲ್ಕು ವರ್ಷ. ಸುವಾಸಿನಿ ಮೈಸೂರಿನಲ್ಲಿ ಜನಿಸಿದ್ದರಿಂದ ಆ ವರ್ಷ ಅನಂತನೂ ತಾಯಿಯ ಜೊತೆಗೆ ಸ್ವಲ್ಪ ಹೆಚ್ಚು ಕಾಲ ಮೈಸೂರಿನಲ್ಲಿ ಇರಬೇಕಾಯಿತು. ನಾನು ಪ್ರೌಢ ಶಾಲೆಯ ಮೊದಲನೆ ವರ್ಷದಲ್ಲಿದ್ದೆ. ಕಲಿಕೆಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದೆ. ಆದರೆ ಅನಂತನೊಂದಿಗೆ ಸ್ವಲ್ಪ ಹೆಚ್ಚು ಕಾಲ ಕಳೆಯಬೇಕೆಂದು ನಮ್ಮ ತಾತ ಒತ್ತಾಯಿಸುತ್ತಿದ್ದರು. ನಾನು ಓದುತ್ತಿದ್ದ ಶಾರದ ವಿಲಾಸ ಪ್ರೌಢಶಾಲೆಯ ಬಳಿಯೇ ಇದ್ದ ಪ್ರಖ್ಯಾತ ಶಾಲೆಯಾದ ಭಗಿನಿ ಸೇವಾ ಸಮಾಜಕ್ಕೆ ನಾನು ಅವನನ್ನು ಕರೆದುಕೊಂಡು ಹೋಗುತ್ತಿದ್ದೆ. ನನ್ನ ಸಹೋದರಿ ಲೀಲಾ ಈ ಶಾಲೆಯಲ್ಲಿ ಪಾಠ ಮಾಡುತ್ತಿದ್ದಳು. ಆಕೆ ಶ್ರೀಮತಿ ಸುಬ್ಬಲಕ್ಷ್ಮಮ್ಮ ಹಾಗೂ ಶ್ರೀಮತಿ ಕಮಲಾ ಅವರ ಜೊತೆಗೆ ಶಿಶುವಿಹಾರವನ್ನು ನೋಡಿಕೊಳ್ಳುತ್ತಿದ್ದಳು. ಅನಂತ ಅಲ್ಲಿದ್ದ ಮಕ್ಕಳೊಡನೆ ಬೇಗನೆ ಹೊಂದಿಕೊಂಡುಬಿಟ್ಟ; ಶಾಲೆಯಲ್ಲೇ ಇರಲು ಇಷ್ಟಪಡುತ್ತಿದ್ದ. ಶಿಕ್ಷಕಿಯರು ಕೆಲವು ಶಿಶುಗೀತೆಗಳನ್ನು ಹೇಳಿಕೊಡುತ್ತಿದ್ದಾಗ ಅವನ ಧ್ವನಿಯೇ ಜೋರಾಗಿರುತ್ತಿತ್ತು . ಎಲ್ಲರಿಗೂ ಬೆರಗಾಗುವಂತೆ ಆ ಗೀತೆಗಳನ್ನು ಬಹುಬೇಗ ಕಂಠಪಾಠ ಮಾಡುತ್ತಿದ್ದ. ಹಾಡುತ್ತಿದ್ದವರಲ್ಲಿ ಅವನೇ ಮೊದಲಿಗನಾಗಿರುತ್ತಿದ್ದ. ಅದಾಗಲೇ ಅವನು ಚಿತ್ರಗಳನ್ನು ನೋಡಿ ಕಥೆಗಳನ್ನು ಹೇಳಲು ಆರಂಭಿಸಿದ್ದ. ಆ ಬಾಲ್ಯದ ದಿನಗಳಲ್ಲೇ ಅವನು ನಾಯಕತ್ವದ ಕೆಲವು ಸೂಚನೆಗಳನ್ನು ತೋರಿಸಿದ್ದ.

ನಂತರದ ದಿನಗಳಲ್ಲಿ ಅವನು ಮೈಸೂರಿಗೆ ಬರುವುದು ಅಪರೂಪವಾಯಿತು. ಮುಂದೆ ನಮ್ಮ ತಾತನವರು ನಿಧನರಾದಾಗ ನಮ್ಮ ಜೊತೆಯಲ್ಲಿದ್ದದ್ದೇ ದೀರ್ಘಕಾಲದ ಭೇಟಿ. ನಂದ ಕುಮಾರ್ ಆಗಿನ್ನೂ ಹುಟ್ಟಿರಲಿಲ್ಲ. ಅನಂತನಿಗೆ ಆಗ ಆರೋ ಏಳೋ ವರ್ಷವಿರಬೇಕು . ಇಷ್ಟು ಸಣ್ಣ ಹುಡುಗ ಅನಂತ ತನ್ನ ಎರಡು ವರ್ಷ ವಯಸ್ಸಿನ ತಂಗಿಯನ್ನು ಬಹಳ ಜೋಪಾನವಾಗಿ ನೋಡಿಕೊಳ್ಳುತ್ತಿದ್ದ, ಅವಳೊಬ್ಬಳೇ ಇರಲು ಬಿಡುತ್ತಿರಲಿಲ್ಲ. ಮನೆ ತುಂಬಾ ಜನರಿದ್ದರೂ ಎಲ್ಲರೂ ಅವರವರ ಕೆಲಸಗಳಲ್ಲಿ ಮಗ್ನರಾಗಿರುತ್ತಿದ್ದರು. ಹೀಗಾಗಿ ಈ ಸಣ್ಣ ಮಕ್ಕಳಿಗೆ ಯಾರೂ ತಮ್ಮನ್ನು ನೋಡಿಕೊಳ್ಳುತ್ತಿಲ್ಲ ಎಂಬಂತಾಗಿತ್ತು. ಆಗ ನಾನು ಅನಂತನೊಡನೆ ಆತ್ಮೀಯ ಒಡನಾಟವನ್ನು ಬೆಳೆಸಿಕೊಂಡೆ. ಅವನೊಡನೆ ಕ್ರಿಕೆಟ್ ಆಡುತ್ತಲೋ ಅಥವಾ ಮನೆಯ ಹತ್ತಿರವೇ ಯಾವುದಾದರೂ ಆಟದ ಚಟುವಟಿಕೆಯಲ್ಲೋ ತೊಡಗಿ ಅವನನ್ನು ನನ್ನ ಜೊತೆ ಉಳಿಸಿಕೊಳ್ಳುತ್ತಿದ್ದೆ. ಈ ಆತ್ಮೀಯತೆಯ ಬಾಂಧವ್ಯವಂತೂ ಬಹುತೇಕ ಕಡೆಯವರೆಗೂ ಹಾಗೆಯೇ ಮುಂದುವರೆಯಿತು.



ನಂತರದ ದಿನಗಳಲ್ಲಿ ನಾನು ನನ್ನ ಓದಿನಲ್ಲಿ ಮಗ್ನನಾದೆ. ಅಷ್ಟೇ ಅಲ್ಲದೆ, ಸೋದರ ಮಾವ ನಾರಾಯಣ ಶಾಸ್ತ್ರಿಯವರ ಮೈಸೂರಿನ ಭೇಟಿಗಳೂ ಬಹಳ ಕಡಿಮೆಯಾದವು. ಅನಂತಕುಮಾರನ ಭೇಟಿಯೂ ಅಪರೂಪವಾಗತೊಡಗಿತು. ಹಲವು ವರ್ಷಗಳ ನಂತರ ೧೯೭೫ರಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾಗಿತ್ತು. ಆ ಸಮಯದಲ್ಲಿ, ತುರ್ತುಪರಿಸ್ಥಿತಿಯ ವಿರುದ್ಧ ತನ್ನ ಧ್ವನಿ ಎತ್ತಿದ ಅನಂತ ಮತ್ತವನ ಸಂಗಡಿಗರನ್ನು ಸರ್ಕಾರ ಬಂಧಿಸಿದ ವಿಷಯ ನನಗೆ ಮೈಸೂರಿನ ಆರ್.ಎಸ್.ಎಸ್ ಮಿತ್ರರಿಂದ ತಿಳಿದುಬಂತು. ಆ ಹೊತ್ತಿಗಾಗಲೇ ನಾನು ಒಬ್ಬ ಉಪನ್ಯಾಸಕನಾಗಿ ಮೈಸೂರಿನ ಕಾಲೇಜಿನಲ್ಲಿ ನನ್ನ ವೃತ್ತಿಯನ್ನು ಆರಂಭಿಸಿದ್ದೆ. ಅನಂತಕುಮಾರ್ ಅಂತಿಮವಾಗಿ ಹೆಚ್ಚಿನ ಅಪಾಯಕ್ಕೊಳಗಾಗದೆ ಬಿಡುಗಡೆ ಆದಾಗ ನನಗೆ ನಿಜಕ್ಕೂ ಸಂತೋಷವಾಯಿತು.

***

ಬಹು ವರ್ಷಗಳ ನಂತರ, ಇ.ಎಲ್.ಟಿ.ಐ ಸಂಸ್ಥೆಯ ಒಂದು ರಾಷ್ಟ್ರೀಯ ಯೋಜನೆಯ ಕಾರ್ಯಕಾರಿ ನಿರ್ದೇಶಕನಾಗಿ ನಾನು ಆಗಾಗ್ಗೆ ನವದೆಹಲಿಯ ಶಾಸ್ತ್ರಿ ಭವನಕ್ಕೆ ಹೋಗುತ್ತಿದ್ದೆ. ಆ ವೇಳೆಗೆ ಅನಂತಕುಮಾರ್ ಯುವಜನ ವ್ಯವಹಾರಗಳ ಸಚಿವಾಲಯದಲ್ಲಿ ಮಂತ್ರಿಯಾಗಿದ್ದರು. ಅವರ ಕಛೇರಿಯೂ ಮಾನವ ಸಂಪನ್ಮೂಲ ವಿಭಾಗದ ಸಚಿವಾಲಯವೂ ಅದೇ ಶಾಸ್ತ್ರಿ ಭವನದ ಕಟ್ಟಡದಲ್ಲಿತ್ತು. ಹೀಗೆ ನಾನು ಭೇಟಿ ನೀಡಿದ ಒಂದು ಸಂದರ್ಭದಲ್ಲಿ ಅನಂತಕುಮಾರ ನನ್ನನ್ನು ಶಾಸ್ತ್ರಿಭವನದ ಕಾರಿಡಾರಿನಲ್ಲಿ ನೋಡಿದರು ನನ್ನನ್ನು ನೋಡಿದೊಡನೆ ಆತ್ಮೀಯವಾಗಿ ತಬ್ಬಿಕೊಂಡು ಮಾತನಾಡಿ, ನನ್ನಿಂದ ನಿಮಗೇನಾದರೂ ಸಹಾಯ ಬೇಕೆ ಎಂದು ಕೇಳಿದರು.

ಆ ಸಮಯದಲ್ಲಿ ಹೆಚ್.ಆರ್.ಡಿ ಸಚಿವಾಲಯಕ್ಕೆ ಸಂಬಂಧಪಟ್ಟ ಭಾಷೆಗಳ ನಿರ್ದೇಶಕರು ನನ್ನೊಡನಿದ್ದುದರಿಂದ ನನಗೆ ಸ್ವಲ್ಪ ಮುಜುಗರವಾಯಿತು. ನನಗೂ ಅನಂತನಿಗೂ ಇದ್ದ ನಿಕಟ ಸಂಬಂಧವನ್ನು ಈ ಅಧಿಕಾರಿ ದುರುಪಯೋಗ ಪಡಿಸಿಕೊಳ್ಳಬಾರದೆಂದು ನಾನು ಅನಂತನ ಕಿವಿಯಲ್ಲಿ ನನ್ನ ಅನಿಸಿಕೆಯನ್ನು ಉಸುರಿದೆ. ಅವರಿಗೆ ನನ್ನ ಮುಜುಗರದ ಕಾರಣ ತಿಳಿಯಿತು. ನನ್ನ ಮುಂದಿನ ಎಂ.ಹೆಚ್.ಆರ್.ಡಿ ಭೇಟಿಗಳ ಸಂದರ್ಭದಲ್ಲಿ ನಾನೂ ಅವರೂ ಸಂಬಂಧಿಕರು ಎಂಬುದನ್ನು ತೋರಿಸಿಕೊಳ್ಳದೆ ಒಂದೆರಡು ಬಾರಿ ಅವರನ್ನು ಭೇಟಿ ಮಾಡಿ ಬಂದೆ.

ನಮ್ಮ ತಾಯಿಯವರ ಜನ್ಮಶತಾಬ್ದಿಯನ್ನು ಆಚರಿಸಿದ ಸಂದರ್ಭವೇ ನನ್ನ ಮತ್ತು ಅನಂತಕುಮಾರ್ ನಡುವಿನ ಕೊನೆಯ ಭೇಟಿಯಾಯಿತು. ನನ್ನ ತಾಯಿ ಅವರಿಗೆ ಸೋದರತ್ತೆ. ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಅವರು ಸಮಾರಂಭಕ್ಕೆ ಬಂದು ನಮ್ಮೊಡನೆ ಸಾಕಷ್ಟು ಸಮಯ ಕಳೆದು ನಮ್ಮೊಡನೆ ಊಟ ಮಾಡಿ ಹೋದರು. ಆ ದಿನದ ನಂತರ ನಾನು ಅವರನ್ನು ನೋಡಲಾಗಲಿಲ್ಲ ಎನ್ನುವ ದುಃಖ ನನ್ನಲ್ಲಿ ಈಗಲೂ ಉಳಿದುಕೊಂಡಿದೆ.

೨೦೧೮ರಲ್ಲಿ ತೀರಿಕೊಂಡ ಅನಂತಕುಮಾರರಿಗೆ ಸಾಯುವ ವಯಸ್ಸೇನೂ ಆಗಿರಲಿಲ್ಲ. ಅವರ ಅಗಲಿಕೆ ನಿಜಾರ್ಥದಲ್ಲಿ ತುಂಬಲಾರದ ನಷ್ಟವೇ. ಅವರು ಬದುಕಿದ್ದು ಅಲ್ಪಕಾಲವಾಗಿದ್ದರೂ ಜನೋಪಯೋಗಿಯಾಗಿ ಆದರ್ಶದ ಬದುಕನ್ನು ನಡೆಸಿದರು. ಅವರ ಸಮಕಾಲೀನರಾಗಿ ಬದುಕಿರುವುದೇ ನಮ್ಮ ಹೆಚ್ಚುಗಾರಿಕೆ. ಸಾರ್ವಜನಿಕ ಜೀವನದಲ್ಲಿ ಅಡಿಯಿಡುತ್ತಿರುವ ಪ್ರತಿಯೊಬ್ಬ ಕಾರ್ಯಕರ್ತನಿಗೂ ಅನಂತಕುಮಾರರ ಬದುಕು ಅನಂತ ದಾರಿದೀಪವಾಗಲಿ.



**ಮೋಹನ ರಾಜ್ ಸಾತುವಳ್ಳಿ**
**ಕನ್ನಡಕ್ಕೆ: ಹೆಚ್. ಆರ್. ಪ್ರಕಾಶ್**

# 5G - ' ಭವಿಷ್ಯದ ತಂತ್ರಜ್ಞಾನದ ಮೊದಲನೆಯ ಪೀಳಿಗೆ'

ಶ್ರೀ ರಾಜೀವ್ ಚಂದ್ರಶೇಖರ್
ಸಂಸದರು, ರಾಜ್ಯಸಭೆ

ಅನಂತಕುಮಾರರ ಜೀವನವನ್ನು ಸಮೀಪದಿಂದ ಗಮನಿಸಿದವರಿಗೆ "ದೇಶ ಮೊದಲು" ಎಂಬ ನುಡಿಗಟ್ಟನ್ನು ವ್ಯಾಪಕವಾಗಿ ಬಳಕೆಗೆ ತಂದ ಮೊದಲಿಗರು ಅವರೇ ಎಂದು ತಿಳಿದಿರುತ್ತದೆ. "ದೇಶ ಮೊದಲು" ಎನ್ನುವುದೊಂದು ನುಡಿಗಟ್ಟು ಮಾತ್ರವಲ್ಲ, ಇದರ ಜೊತೆಗೆ ಹೃದಯದಾಳದಿಂದ ಉನ್ನತ ಮೌಲ್ಯಗಳ ಮತ್ತು ನೈತಿಕತೆಯ ದನಿ ಅನುರಣಿಸುತ್ತದೆ. "ದೇಶ ಮೊದಲು ಸಂವಾದ" ಎಂಬ ಈ ಸಂವಾದ ಸರಣಿಯು ಅನಂತಕುಮಾರರ ಕೆಲಸಗಳ ಮುಂದುವರಿಕೆಯೇ ಆಗಿದೆ.

ನಾವು 2 G ಇಂದ 4 G ವರೆಗಿನ ತಂತ್ರಜ್ಞಾನವನ್ನು ಇದುವರೆಗೆ ವ್ಯಾಪಕವಾಗಿ ಬಳಸಿದ್ದೇವೆ. ಆದರೆ, ಜನಸಾಮಾನ್ಯರ ಮನಸ್ಸಿನಲ್ಲಿ, ಅಷ್ಟೇಕೆ ದೂರಸಂಪರ್ಕ ಸಚಿವಾಲಯದ ಅಧಿಕಾರಿಗಳ ಮನಸ್ಸಿನಲ್ಲಿಯೂ ಕೂಡ ಇವು ಅತ್ಯಧಿಕ ವೇಗದಲ್ಲಿ ಸಂಪರ್ಕ ಸಾಧಿಸುವ ಅಂತರ್ಜಾಲ ಸಾಧನಗಳು ಎಂಬ ಭಾವನೆ ಇದೆ. ನಮ್ಮೆಲ್ಲ ಸಮಾನಮನಸ್ಕರ ಪ್ರಯತ್ನದಿಂದ 2008-2009ರ ಹೊತ್ತಿಗೆ ಸ್ಪೆಕ್ಟ್ರಂಗಳನ್ನು ದೇಶದ ಆಸ್ತಿ ಎಂದು ಪರಿಗಣಿಸಿ ಅದನ್ನು ಹರಾಜು ಹಾಕುವ ಮೂಲಕ ದೇಶದ ಖಜಾನೆಗೆ ಒಂದಷ್ಟು ಹಣ ತುಂಬುವ ಪ್ರಯತ್ನ ಪ್ರಾರಂಭವಾಯಿತು. ಪ್ರತಿಯೊಂದು ಹಂತದ ಬೆಳವಣಿಗೆಯೂ ಅಂತರ್ಜಾಲ ಮತ್ತು ಮೊಬೈಲ್ ಸಂವಹನಗಳಲ್ಲಿ ವೇಗವನ್ನು ಹೆಚ್ಚಿಸುವ ಬದಲಾವಣೆಗಳು ಎಂದೇ ಭಾವಿಸಲಾಗುತ್ತಿತ್ತು. ಆದರೆ ಇದೀಗ 5 G ತಂತ್ರಜ್ಞಾನವು ಕೇವಲ ಮೊಬೈಲ್ ಮತ್ತು ಅಂತರ್ಜಾಲಗಳ ವೇಗವನ್ನು ಹೆಚ್ಚಿಸುವ ತಂತ್ರಜ್ಞಾನ ಮಾತ್ರವಲ್ಲ, ಇದು ಸಂಪೂರ್ಣ ಹೊಸಪೀಳಿಗೆಯ ತಂತ್ರಜ್ಞಾನ ಎಂದು ಅರಿವಾಗತೊಡಗಿದೆ. ಇದು 2G 3G 4G ಗಳ ವಿಕಾಸ ಕ್ರಮದಲ್ಲಿ ಸಹಜವಾಗಿ ಬಂದ ತಂತ್ರಜ್ಞಾನವಲ್ಲ, ಇದೊಂದು ಸಂಪೂರ್ಣ ಭಿನ್ನವಾದ ಹೊಸ ಅಂತರ್ಜಾಲ ವ್ಯವಸ್ಥೆಯ ಮೊದಲ ಪೀಳಿಗೆಯ ತಂತ್ರಜ್ಞಾನವಾಗಿದೆ. ಇದು ಹಳೆಯ ಪರಿಕಲ್ಪನೆಗಳನ್ನೆಲ್ಲ ಮುರಿದಿಕ್ಕಿ ಭವಿಷ್ಯದ ಅಂತರ್ಜಾಲವನ್ನು, ವ್ಯವಹಾರಗಳನ್ನು, ತಂತ್ರಜ್ಞಾನವನ್ನು, ಗ್ರಾಹಕರ ಸೇವೆಗಳನ್ನು ನಿಯಂತ್ರಿಸಲಿದೆ. ಇಂತಹ ಸನ್ನಿವೇಶದಲ್ಲಿ ಕೆಲವೊಂದು ಅಂಶಗಳ ಕಡೆ ಗಮನ ಹರಿಸುವುದು ಅವಶ್ಯಕ :-

1. 5G ತಂತ್ರಜ್ಞಾನದ ಬಳಕೆ ಹೆಚ್ಚಾಗುತ್ತಿರುವಂತೆ ಬಳಕೆದಾರರ ಗೋಪ್ಯತೆ, ಅವರ ಚಹರೆ ಮತ್ತು ಅವರಿಗೆ ಸಂಬಂಧಿಸಿದ ದತ್ತಾಂಶಗಳ ರಕ್ಷಣೆ ಇವೆಲ್ಲ ಚಿಂತೆಗೀಡು ಮಾಡುವ ವಿಷಯಗಳಾಗುತ್ತವೆ. ಇವು 5 G ವಾತಾವರಣದಲ್ಲಿ ನಿಜವಾದ ಸವಾಲುಗಳಾಗಲಿವೆ.

2. 5G ತಂತ್ರಜ್ಞಾನ ಮತ್ತು ಅಂತರ್ಜಾಲದಲ್ಲಿ ಮುಂದೆ ಬರಲಿರುವ ಎಲ್ಲಾ ಹೊಸ ತಂತ್ರಜ್ಞಾನಗಳ ತಂತ್ರಾತ್ಮಕ ಸ್ವಾಮಿತ್ವ ಇನ್ನೊಂದು ಪ್ರಮುಖ ಸವಾಲು. 2010ರಲ್ಲಿ ಚೀನಾ ದೇಶವು ಅರೇಬಿಯಾ ದೇಶದ ಜೊತೆಗೂಡಿ ಎಲ್ಲ ತಂತ್ರಜ್ಞಾನಗಳ ನಿಯಂತ್ರಣವನ್ನು ಅಮೆರಿಕದ ವಶದಿಂದ ತಪ್ಪಿಸಿ ವಿಶ್ವಸಂಸ್ಥೆಯ ಅಧಿಕಾರಿಗಳ ಹಿಡಿತಕ್ಕೆ ವರ್ಗಾಯಿಸಬೇಕೆಂಬ ಒಂದು ವಿಫಲ ಪ್ರಯತ್ನವನ್ನು ಮಾಡಿತು. ಆಗಿನ ಭಾರತ ಸರಕಾರವು ಈ ಎರಡು ಸರ್ವಾಧಿಕಾರಿ ದೇಶಗಳ ಜೊತೆಗೆ ಕೈಗೂಡಿಸಿತ್ತು. ಈ ಹುನ್ನಾರದ ಅಪಾಯವನ್ನರಿತ ನಾವು ಪ್ರಬಲವಾಗಿ ವಿರೋಧಿಸಿದೆವು. ಇದರಿಂದಾಗಿ ಸರಕಾರವು ಹಿಂದೆ ಸರಿಯಬೇಕಾಯಿತು. ಸೌದಿ ಅರೇಬಿಯಾ, ಚೀನಾಗಳಂತಹ ಪ್ರಜಾಸತ್ತೆ ವಿರೋಧಿ, ಸರ್ವಾಧಿಕಾರಿ ದೇಶಗಳ ಕೈಗೆ ಅಂತರ್ಜಾಲ ವ್ಯವಸ್ಥೆಗಳ ನಿಯಂತ್ರಣ ದೊರೆತಿದ್ದರೆ ಎಂತಹ ಅನಾಹುತವಾಗುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಬಹುದು.

ಭವಿಷ್ಯದ ತಂತ್ರಜ್ಞಾನಗಳು ಜನರ ಬದುಕನ್ನು ಸಂಪೂರ್ಣವಾಗಿ ನಿಯಂತ್ರಿಸಲಿರುವ ಸನ್ನಿವೇಶದಲ್ಲಿ ಅವುಗಳು ಮುಕ್ತ ಸಮಾಜದ ಹಿಡಿತದಲ್ಲಿರುವುದು ಅಗತ್ಯ. ಅದರ ಬದಲಾಗಿ ಚೀನಾದಂತಹ ಬೇಜವಾಬ್ದಾರಿ ಸರ್ವಾಧಿಕಾರಿ ದೇಶಗಳ ಹಿಡಿತದಲ್ಲಿರುವುದರಿಂದ ಇಡೀ ಜಗತ್ತು ಅಪಾಯದ ಅಂಚನ್ನು ತಲುಪುವ ಸಂಭವವಿದೆ.

3. 2G ಇಂದ 4G ವರೆಗಿನ ನಮ್ಮ ಎಲ್ಲ ವೇದಿಕೆಗಳು, ರೇಡಿಯೋ, ಬ್ರಾಡ್ ಬ್ಯಾಂಡ್, ಸ್ವಿಚಿಂಗ್ ಎಲ್ಲವೂ ವಿದೇಶಿ ತಂತ್ರಜ್ಞಾನವನ್ನು ಅವಲಂಬಿಸಿದ್ದವು. ಆದರೆ 5 G ತಂತ್ರಜ್ಞಾನದ ಅಪಾರ ಸಾಧ್ಯತೆಗಳು ಎಚ್ಚರಿಕೆಯ ಗಂಟೆಯನ್ನು ಮೊಳಗಿಸಿ ನಮ್ಮಲ್ಲಿ ವಾಸ್ತವದ ಅರಿವು ಮೂಡಿಸಿವೆ. ನಮ್ಮ ದೇಶವೂ ಭವಿಷ್ಯದ ತಂತ್ರಜ್ಞಾನ, ನೆಟ್ ವರ್ಕ್, ಮುಂತಾದ ವಿಷಯಗಳಲ್ಲಿ ಸಾಮರ್ಥ್ಯವನ್ನು ವರ್ಧಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಿಸುತ್ತಿದೆ. ಹೀಗಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ವಿನ್ಯಾಸಗಳ ಅಭಿವೃದ್ಧಿಯ ಕಡೆಗೆ ನಮ್ಮ ಗಮನ ಹರಿಯತೊಡಗಿದೆ.



4. ಭಾರತೀಯ ದೂರವಾಣಿ ನಿಗಮ, BSNL ನಂತಹ ಸಾರ್ವಜನಿಕ ಸಂಸ್ಥೆಗಳ ಭವಿಷ್ಯವು ನಮ್ಮೆದುರಿನ ಇನ್ನೊಂದು ಪ್ರಶ್ನೆಯಾಗಿದೆ. ಕೋವಿಡ್ ಮಹಾಮಾರಿಯು ದೇಶದೊಳಗೆ ಕಾಲಿರಿಸುವ ಮೊದಲು 5G ಸ್ಪೆಕ್ಟ್ರಮ್ ಗಳನ್ನು ನಾವು ಹರಾಜು ಮಾಡಿದ್ದಿದ್ದರೆ ಹುವಾವೇಯಂತಹ ದೈತ್ಯ ಕಂಪನಿಗಳು ಎಲ್ಲ ಅನುಮತಿಗಳನ್ನು, ಗುತ್ತಿಗೆಗಳನ್ನು ಬಾಚಿಕೊಳ್ಳುತ್ತಿದ್ದವು ಎಂಬುದರಲ್ಲಿ ಅನುಮಾನವೇ ಇಲ್ಲ. ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿ ಇದೇ ಕಂಪೆನಿ ತನ್ನ ಆಧಿಪತ್ಯವನ್ನು ನಡೆಸುತ್ತಿದೆ. ಇದೀಗ ಚೀನಾದೇಶದ ಕಂಪನಿಗಳು ತಾವು ಒದಗಿಸುವ ಮೂಲ ಉತ್ಪನ್ನಗಳು ಮತ್ತು ಸೇವೆಗಳ ಮೂಲಕ ಗ್ರಾಹಕರ ಮಾಹಿತಿಗಳನ್ನು ಮತ್ತು ದತ್ತಾಂಶಗಳನ್ನು ಸಂಗ್ರಹಿಸಿ ಚೀನಾ ದೇಶಕ್ಕೆ ರವಾನಿಸುತ್ತಿರುವ ಸತ್ಯ ಬಯಲಾಗಿದೆ. ಈ ಕೃತ್ಯವು ಗೋಪ್ಯತೆ ಮತ್ತು ದತ್ತಾಂಶ ರಕ್ಷಣೆಯ ಅಂತಾರಾಷ್ಟ್ರೀಯ ನಿಯಮಗಳಿಗೆ ವಿರುದ್ಧವಾಗಿದೆ. ಇದುವರೆಗೆ ಭಾರತದ ಎಲ್ಲ ರಕ್ಷಣಾ ಮತ್ತು ಆಡಳಿತ ವ್ಯವಹಾರಗಳನ್ನು ಬಿಎಸ್ಸೆನ್ನೆಲ್ ಸಂಸ್ಥೆ ನಿರ್ವಹಿಸುತ್ತಿದೆ. ಭವಿಷ್ಯದಲ್ಲಿ ಎಲ್ಲ ವ್ಯವಹಾರಗಳಲ್ಲಿಯೂ 5G ತಂತ್ರಜ್ಞಾನವನ್ನು ಬಳಸುವಾಗ ದೇಶದ ಆಂತರಿಕ ಮಾಹಿತಿಗಳ ಸಂರಕ್ಷಣೆ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಬಿಎಸ್ಎನ್ಎಲ್ ಸಂಸ್ಥೆಯು ತನ್ನ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗಗಳನ್ನು ಬಲಪಡಿಸಿಕೊಂಡು ಭವಿಷ್ಯದ ಜವಾಬ್ದಾರಿಗಳನ್ನು ನಿರ್ವಹಿಸಲು ಸಿದ್ಧವಾಗಬೇಕಾಗಿದೆ.

ಇಂತಹದೊಂದು ಸನ್ನಿವೇಶವನ್ನು 2019ರಲ್ಲಿಯೇ ಮನಗಂಡ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಹೊಸ ತಂತ್ರಜ್ಞಾನ ಕಂಪನಿಗಳ ಪ್ರಾಬಲ್ಯ, ಸ್ಪರ್ಧಾತ್ಮಕ ಪರಿಸರ, ಗ್ರಾಹಕರಿಗೆ ಆಯ್ಕೆಗಳ ಸೌಲಭ್ಯಗಳು, ಕಾನೂನುಗಳ ಪರಿಷ್ಕರಣೆ ಮುಂತಾದ ಎಲ್ಲ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಸೂಕ್ತವಾದ ರೂಪುರೇಷೆಗಳನ್ನು ಸಿದ್ಧಪಡಿಸಿದ್ದಾರೆ. ಅತ್ಯಂತ ಕ್ಷಿಪ್ರವಾಗಿ ಬದಲಾಗುತ್ತಿರುವ ಅಂತರ್ಜಾಲ ಯುಗದಲ್ಲಿ ಇಂದಿಗೂ ಹಳೆಯ ಕಾಲದ ಕಾನೂನುಗಳೇ ಜಾರಿಯಲ್ಲಿವೆ. TRAI ಮತ್ತು IT ಕಾಯಿದೆಗಳಲ್ಲಿ ಕಡೆಯ ಬಾರಿ ತಿದ್ದುಪಡಿ ನಡೆದಿರುವುದು 2008ಕ್ಕಿಂತ ಮೊದಲು. ಆದುದರಿಂದ ಸ್ಪರ್ಧಾತ್ಮಕ ಪರಿಸರವನ್ನು ನಿರ್ಮಾಣ ಮಾಡುವ, ಬಳಕೆದಾರರ ಹಿತಾಸಕ್ತಿಗಳನ್ನು ರಕ್ಷಿಸುವ, ಆಧುನಿಕ ಕಾನೂನುಗಳ ಚೌಕಟ್ಟುಗಳನ್ನು ದೇಶ ಹೊಂದಬೇಕಾಗಿದೆ. 5G ತಂತ್ರಜ್ಞಾನದ ಬಳಕೆಯ ಸಂದರ್ಭದಲ್ಲಿ ಜನರ ವಿಶ್ವಾಸವು ಅತಿ ಮುಖ್ಯವಾಗುತ್ತದೆ. ಅವರಿಗೆ ತಾವು ಬಳಸುವ ಸೇವೆಗಳು ವಿಶ್ವಾಸಾರ್ಹ ನೆಟ್ ವರ್ಕ್ ಮತ್ತು ಸೇವಾ ಸರಬರಾಜುದಾರರ ಮೂಲಕವೇ ದೊರೆಯುತ್ತಿದೆ ಎಂಬ ನಂಬಿಕೆ ಬರಬೇಕು.

5G ತಂತ್ರಜ್ಞಾನವು ಭವಿಷ್ಯದ ತಂತ್ರಜ್ಞಾನದ ಮೊದಲನೆಯ ಪೀಳಿಗೆಯಾಗಿದೆ. ಇದು ಯಂತ್ರಾಂಶ ಆಧಾರಿತ ತಂತ್ರಜ್ಞಾನವಾಗಿರುವುದರಿಂದ ಈ ಕ್ಷೇತ್ರದಲ್ಲಿ ಭಾರತೀಯರಿಗೆ ವಿಪುಲ ಅವಕಾಶಗಳು ಒದಗಿಬರಲಿವೆ. ಈಗಾಗಲೇ ವಿಶ್ವದ ಬಹುತೇಕ ಮುಕ್ತ ರ್‍ಯಾಮ್ ಆರ್ಕಿಟೆಕ್ಚರ್ ಗಳಲ್ಲಿ ಭಾರತೀಯರು ಪ್ರಾಬಲ್ಯ ಸಾಧಿಸಿದ್ದಾರೆ. ಈ ಕ್ಷೇತ್ರದಲ್ಲಿ ಅತ್ಯಂತ ನವೀನತಮ ಮತ್ತು ಚತುರ ಆವಿಷ್ಕಾರಗಳನ್ನು ಭಾರತೀಯರು ಮಾಡಿದ್ದಾರೆ. ವಿಶ್ವದ ಅತಿ ದೊಡ್ಡ ಸ್ಟಾರ್ಟ್‌ಅಪ್ ಕಂಪನಿಗಳು ಬೆಂಗಳೂರು ಮತ್ತು ಹೈದರಾಬಾದ್ ನಗರಗಳಲ್ಲಿ ನೆಲೆಯಾಗಿವೆ. 25 ವರ್ಷಗಳ ಕಾಲ ಸಂವಹನ ತಂತ್ರಜ್ಞಾನದಲ್ಲಿ ಹಿಂದುಳಿದಿದ್ದ ನಾವು ಇದುವರೆಗೆ ತಂತ್ರಜ್ಞಾನವನ್ನು ಖರೀದಿಸುತ್ತಿದ್ದೆವು. ಇದು ಬದಲಾಗಿ ತಂತ್ರಜ್ಞಾನವನ್ನು ಮಾರುವವರ ಮಾರುಕಟ್ಟೆಯನ್ನು ನಾವು ಪ್ರವೇಶಿಸಲಿದ್ದೇವೆ ಎಂಬ ಭರವಸೆ ನಮ್ಮಲ್ಲಿ ಮೂಡಿದೆ.

## ಸಾರ್ವಜನಿಕರಲ್ಲಿ ವಿನಂತಿ

ಆತ್ಮೀಯರೇ. ಪ್ರತಿ ದಿನ ಲಕ್ಷಾಂತರ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ಒದಗಿಸುತ್ತಿದ್ದ ಅದಮ್ಯಚೇತನ ಸಂಸ್ಥೆ 2020 ರ ಮೊದಲ ಲಾಕ್ ಡೌನ್ ಸಮಯದಲ್ಲಿ 7 ಲಕ್ಷ ಜನರಿಗೆ ಊಟದ ಪ್ಯಾಕೆಟ್, 28,000 ಜನರಿಗೆ ರೇಷನ್ ಕಿಟ್ ವಿತರಣೆ ಮಾಡಿದ್ದಷ್ಟೆ ಅಲ್ಲದೇ -- ಸಂಸ್ಥೆಯ ಪ್ರಧಾನ ಪೋಷಕರಾದ ಶ್ರೀ ಅನಂತ ಕುಮಾರ್ ರವರ ಸ್ಮರಣಾರ್ಥವಾಗಿ ನವೆಂಬರ್ ನಿಂದ ಪ್ರಾರಂಭವಾದ ನಿತ್ಯ ಅನ್ನದಾನವೂ, ಪ್ರತಿ ದಿನ 4 ಕೇಂದ್ರಗಳಲ್ಲಿ ಮುಂದುವರಿಸಿಕೊಂಡು ಬಂದು, ನೂರಾರು ಬಡವರ ಹಸಿವನ್ನು ನೀಗಿಸುತ್ತಿದೆ. ಈಗ ಕೋವಿಡ್ ಎರಡನೇ ಅಲೆಯ ಈ ವಿಷಮ ಪರಿಸ್ಥಿತಿಯಲ್ಲಿಯೂ ಸಹ ಅದಮ್ಯಚೇತನ ಸಂಸ್ಥೆ ಮುಂಚೂಣಿಯಲ್ಲಿದ್ದು ಪ್ರತಿದಿನ 6,000 ಜನರಿಗೆ ಊಟವನ್ನು ಪ್ಯಾಕ್ ಮಾಡಿ ಕೊಡಲಾಗುತ್ತಿದೆ. ಅಂದರೆ ಆಸ್ಪತ್ರೆಗಳಲ್ಲಿ ಕೆಲಸ ಮಾಡುವವರು, ಲಸಿಕಾ ಕೇಂದ್ರಗಳಲ್ಲಿ ,ಕೋವಿಡ್ ವಾರಿಯರ್ಸ್, ಆಸ್ಪತ್ರೆಗಳಲ್ಲಿ ರುವ ರೋಗಿಗಳ ಜೊತೆಯಲ್ಲಿರುವ ಸಹಾಯಕರಿಗೂ ಸಹ ಆಹಾರವನ್ನು ವಿತರಿಸಲಾಗುತ್ತಿದೆ. ಈ ಆಹಾರ ತಯಾರಿಕೆಗೆ ಕೇವಲ ದಿನಸಿ ಖರ್ಚಲ್ಲದೇ ಇಂಧನ, ವಿದ್ಯುತ್, ನೀರು ಮುಂತಾದ ಖರ್ಚು, ಸಿಬ್ಬಂದಿ ವರ್ಗದವರ ಸಂಬಳ ಇತ್ಯಾದಿ ಸಂಸ್ಥೆ ಭರಿಸಬೇಕಾಗುತ್ತದೆ. ಈ ಯೋಜನೆ ಯಶಸ್ವಿಯಾಗಿ ನಡೆಯಲು ದಾನಿಗಳ ಮತ್ತು ಸ್ವಯಂ ಸೇವಕರ ಸಹಕಾರ ಮುಖ್ಯವಾಗಿದೆ. ಆದ್ದರಿಂದ ನೀವು ಹಣ ಸಹಾಯ ಮಾಡುವುದರ ಮೂಲಕ ನಮ್ಮೊಂದಿಗೆ ಕೈಜೋಡಿಸಬೇಕೆಂದು ವಿನಂತಿ.


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಮೊಬೈಲ್ ನಂ: 8904623967 / 9590469830

ಹಣ ನೀಡಲಿಚ್ಛಿಸುವವರು ಈ ಕೆಳಗಿನ ಯಾವುದಾದರೊಂದು ವಿಧಾನದಲ್ಲಿ ಕಳುಹಿಸಬಹುದು.ಬ್ಯಾಂಕ್ ಖಾತೆ ವಿವರ :

Account Name: Smt. Girija Shastry Memorial Trust
Bank/Branch: HDFC Bank, K.R.Road branch, Bengaluru
SB Account No.: 50100215738251
IFSC: HDFC0000875
Online donation: https://www.adamyachetana.org/donation/
UPI: UPI ID 7892098948@ybl

# “ಅನಂತ ಚೇತನ” – ಸಾರ್ಥಕ ಬದುಕಿನ ಐತಿಹಾಸಿಕ ದಾಖಲೆ

ಕೆ. ಜನಾರ್ದನ ತುಂಗ




ಅನಂತಕುಮಾರರ ಜೀವನ ಒಂದು ತೆರೆದ ಪುಸ್ತಕ. ಈ ಪುಸ್ತಕದ ಪುಟಗಳೆಷ್ಟೆಂದು ತಿಳಿದವರಿಲ್ಲ. ಪ್ರತಿಯೊಬ್ಬರಿಗೂ ಈ ಪುಸ್ತಕದ ಕೆಲವು ಪುಟಗಳಷ್ಟೇ ಪರಿಚಿತವಾಗಿವೆ. ಶ್ರೀ ಟಿ. ಎಸ್. ಗೋಪಾಲರು ಬರೆದಿರುವ “ಅನಂತ ಚೇತನ” ಪುಸ್ತಕವು (ಇಂಗ್ಲಿಶ್ ಅನುವಾದ : ಪೂರ್ಣಿಮಾ ಕುಂಟೂರ್) ಬೃಹತ್ ಹೊತ್ತಗೆಯೊಂದಕ್ಕೆ ಪ್ರವೇಶ ದೊರಕಿಸುವ ಪರಿಚಯ ಪುಸ್ತಕದಂತಿದೆಯೆಂದರೆ ಅತಿಶಯೋಕ್ತಿಯಲ್ಲ.


ವ್ಯಕ್ತಿಗಳ ಬಗ್ಗೆ ಬರೆಯುವುದು ಕಷ್ಟದ ಕೆಲಸ. ತುಂಬ ಗೌರವಾನ್ವಿತ ವ್ಯಕ್ತಿಗಳ ಬಗ್ಗೆ ಬರೆಯುವಾಗಲಂತೂ ಅತಿರಂಜಕತೆ ನುಸುಳುವ ಸಂಭವವೂ ಇದೆ. ಆದರೆ ಶ್ರೀ ಗೋಪಾಲರ ಪಳಗಿದ ಲೇಖನಿಯಿಂದ “ ಶ್ರೀ ಅನಂತಕುಮಾರರ ಸಾಧನೆಗಳು ಮತ್ತು ಸಾಹಸಗಳು ಸರಳ ರೇಖೆಯಂತೆ” ( ತಮ್ಮ ಮುನ್ನುಡಿಯಲ್ಲಿ ಶ್ರೀ ಟಿ ವಿ ವೆಂಕಟಾಚಲ ಶಾಸ್ತ್ರಿಯವರು ಹೇಳಿರುವಂತೆ ) ಭಾವಾತಿರೇಕವಿಲ್ಲದೆ ಮೂಡಿಬಂದಿವೆ.

ಅನಂತಕುಮಾರರ ಜೀವನಕ್ಕೆ ಮುನ್ನುಡಿ ಬರೆದವರು ಅವರ ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿಯವರು. ಅನಂತಕುಮಾರರ ಬದುಕಿನ ಬೇರುಗಳು ಅವರ ತಾಯಿಯ ಬದುಕಿನ ಫಲವತ್ತಾದ ಮಣ್ಣಿನಲ್ಲಿ ವಿಸ್ತರಿಸಿಕೊಂಡಿವೆ. ಅವರ ಬಾಲ್ಯವನ್ನು ಗಮನಿಸಿದರೆ ಒಂದು ಸಾರ್ಥಕ ಬದುಕಿನ ರೂಪುರೇಷೆಗಳನ್ನು ತಾವೇ ಹೆಣೆದುಕೊಂಡು ಅದರಂತೆ ಬದುಕನ್ನು ಅವರು ನಿರ್ವಹಿಸಿರುವುದು ಕಂಡುಬರುತ್ತದೆ.

ಅನಂತಕುಮಾರರ ಬಾಲ್ಯದ ಮೊಳಕೆಗಳು, ವಿದ್ಯಾರ್ಥಿ ಜೀವನ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು, ತುರ್ತು ಪರಿಸ್ಥಿತಿ, ಕೌಟುಂಬಿಕ ಜೀವನ, ರಾಜಕೀಯ ಜೀವನ, ಮಂತ್ರಿಯಾಗಿ ಮಾಡಿದ ಸಮಾಜಮುಖಿ ಕೆಲಸಗಳು, ಕೊನೆಗೆ ಅವರನ್ನು ಬಲಿ ತೆಗೆದುಕೊಂಡ ಕಾಯಿಲೆ ಇವೆಲ್ಲವುಗಳನ್ನೂ ಈ ಕಿರುಹೊತ್ತಿಗೆಯಲ್ಲಿ ಸಹಜವಾಗಿ ದಾಖಲಿಸಲಾಗಿದೆ. ಹೀಗೆ ಬರೆಯಲು ಲೇಖಕರು ಅನಂತಕುಮಾರರ ಒಡನಾಡಿಗಳಿಂದ ವಿಷಯಗಳನ್ನು ನೇರವಾಗಿ ಸಂಗ್ರಹಿಸಿದ್ದಾರೆ. ಅನೇಕ ಆಕರಗಳನ್ನು ಗಮನಿಸಿದ್ದಾರೆ. ಹೀಗಾಗಿ ಈ ಪುಸ್ತಕವು ಪ್ರಾಮಾಣಿಕವಾಗಿದ್ದು, ಕೇವಲ ಅನಂತಕುಮಾರರ ಬಗ್ಗೆ ಮಾತ್ರವಲ್ಲ, ಸಮಕಾಲೀನ ಸನ್ನಿವೇಶಗಳ ಬಗೆಗೆ ಒಂದು ಉತ್ತಮ ಐತಿಹಾಸಿಕ ದಾಖಲೆಯಾಗಿಯೂ ಉಳಿದುಕೊಳ್ಳುತ್ತದೆ.

1987 ರಲ್ಲಿ ರಾಜ್ಯ ರಾಜಕಾರಣಕ್ಕೆ ಕಾಲಿಟ್ಟ ಅನಂತಕುಮಾರ್ ಬಹುಬೇಗ ರಾಷ್ಟ್ರ ರಾಜಕಾರಣದಲ್ಲಿಯೂ ತಮ್ಮ ಛಾಪನ್ನು ದಾಖಲಿಸಿದರು. ರಾಷ್ಟ್ರಹಿತವನ್ನು ಲಕ್ಷ್ಯವಾಗಿರಿಸಿಕೊಂಡರೂ ರಾಜ್ಯದ ಹಿತವನ್ನು ಮರೆಯದ ಅನಂತಕುಮಾರರು ಕರ್ನಾಟಕ ರಾಜ್ಯಕ್ಕೆ ನೀಡಿದ ಕೊಡುಗೆಗಳು ಈ ಪುಸ್ತಕದಲ್ಲಿ ಸವಿವರ ದಾಖಲಾಗಿವೆ. ಕನ್ನಡದ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಗಳ ರಕ್ಷಣೆಗೆ ಕಂಕಣಬದ್ಧರಾಗಿದ್ದ ಕುಮಾರರ ಈ ಮುಖವನ್ನು ಅವರಿಂದ ಉಪಕೃತರಾದ, ಅವರ ಜೊತೆ ಕೈಗೂಡಿಸಿದ ವ್ಯಕ್ತಿಗಳ ಮಾತಿನಲ್ಲಿಯೇ ಸಂಗ್ರಹಿಸಿರುವುದೂ ಒಂದು ವಿಶೇಷ.

ರಾಷ್ಟ್ರ ರಾಜಕಾರಣದಲ್ಲಿ ಅನಂತಕುಮಾರರು ಅಜಾತಶತ್ರುವಾಗಿದ್ದರು. ಅವರು ಪಕ್ಷಾತೀತವಾಗಿ ಯೋಚಿಸಬಲ್ಲವರಾಗಿದ್ದರು. ಸಂಕಟ ಬಂದಾಗ ವೆಂಕಟರಮಣ ಎಂಬಂತೆ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಪಕ್ಷವು ಅನಂತಕುಮಾರರತ್ತ ನೋಡುತ್ತಿತ್ತು. ಪ್ರವಾಸೋದ್ಯಮದಿಂದ ಮೊದಲುಗೊಂಡು ಸಂಸದೀಯ ವ್ಯವಹಾರಗಳ ವರೆಗೆ ಅನೇಕ ಸಚಿವಾಲಯಗಳನ್ನು ನಿರ್ವಹಿಸಿದ ಅನಂತಕುಮಾರರು ಯಾವುದೇ ಸಚಿವಾಲಯದಿಂದ ಕೆಲಸ ಮಾಡಿಸಿಕೊಳ್ಳುವಷ್ಟರ ಮಟ್ಟಿನ ಸೌಹಾರ್ದವನ್ನು ಸಹೋದ್ಯೋಗಿಗಳೊಂದಿಗೆ ಇರಿಸಿಕೊಂಡಿದ್ದರು ಎಂಬುದು ಪುಸ್ತಕವನ್ನು ಓದಿದವರಿಗೆ ಸ್ಪಷ್ಟವಾಗುತ್ತದೆ.




ಅನಂತಕುಮಾರರು ಬಾಲ್ಯದಲ್ಲಿ ಕಂಡ ಕನಸುಗಳನ್ನೆಲ್ಲ ನನಸಾಗಿಕೊಂಡರು. ಆದರೆ “ ಮುಂದೊಂದು ದಿನ ನಾನು ನಮ್ಮ ದೇಶದ ಪ್ರಧಾನಿಯಾಗುತ್ತೇನೆ” ಎಂದು ಸಾರಿದ ಅವರ ಸಂಕಲ್ಪ ನಿಜವಾಗುವುದರೊಳಗೆ ಅವರು ಇಹಲೋಕವನ್ನು ತೊರೆದರು. ಸಾವು ತಮ್ಮೆದುರು ಹೆಬ್ಬಾಯಿ ತೆರೆದು ನಿಂತಾಗಲೂ ಅನಂತಕುಮಾರರು ತಮ್ಮ ಕೊನೆಯುಸಿರಿನವರೆಗೂ ರಾಷ್ಟ್ರಹಿತವನ್ನೇ ಚಿಂತಿಸಿದರು. ಇಂತಹ ಕರ್ಮಯೋಗಿಯ ಅಂತ್ಯವನ್ನು ಕೂಡ ಶ್ರೀ ಗೋಪಾಲರು ನಿರ್ವಿಕಾರವಾಗಿ ಬರೆದಿದ್ದಾರೆ.

ಅಪ್ಪಟ ದೇಶಪ್ರೇಮಿ, ಅಪ್ರತಿಮ ಮಾತುಗಾರ, ಸಂಧಾನ ಚತುರ, ಆಕಾಶದತ್ತ ದೃಷ್ಟಿ ನೆಟ್ಟಿದ್ದರೂ ನೆಲದ ಋಣಕ್ಕೆ ಕಟ್ಟು ಬಿದ್ದ ಅಜಾತಶತ್ರು ಅನಂತಕುಮಾರರ ಕುರಿತು ಅಭಿಮಾನದ ಒಂದು ಒಳನೋಟವನ್ನು ಬೀರುವಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ. ಅನಂತಕುಮಾರರ ಜೀವನದ ವಿವಿಧ ಮಜಲುಗಳನ್ನು ಗುರುತಿಸುವ ಛಾಯಾಚಿತ್ರಗಳು ಪುಸ್ತಕದಲ್ಲಿ ಪ್ರಸ್ತಾಪಿತವಾಗಿರುವ ವಿಷಯಗಳನ್ನು ವಿಸ್ತರಿಸುವಲ್ಲಿ ಸಹಕಾರಿಯಾಗಿವೆ. ಒಂದೇ ಒಂದು ಬೆರಳಚ್ಚು ದೋಷವಿಲ್ಲದಂತೆ ಅಂದವಾಗಿ ಮುದ್ರಿತವಾಗಿರುವ ಈ ಪುಸ್ತಕಕ್ಕೆ ಶ್ರೀ ಟಿ ವಿ ವೆಂಕಟಾಚಲ ಶಾಸ್ತ್ರಿಗಳ ಮುನ್ನುಡಿಯಿದೆ. ಅಂದಣದ ಮೇಲೆ ಕುಂದಣವಿಟ್ಟಂತೆ ರಾಷ್ಟ್ರಪತಿ, ಶ್ರೀ ಕೋವಿಂದ್, ಪ್ರಧಾನಿ, ಶ್ರೀ ನರೇಂದ್ರ ಮೋದಿ, ಶ್ರೀ ಲಾಲ್ ಕೃಷ್ಣ ಅದ್ವಾನಿ ಮುಂತಾದ ಹಿರಿಯರಿಂದ ಮೊದಲ್ಗೊಂಡು ಅನಂತಕುಮಾರರ ಅನೇಕ ಒಡನಾಡಿಗಳ ನುಡಿನಮನಗಳೂ ಕೂಡ ಅವರ ವ್ಯಕ್ತಿ ಚಿತ್ರವನ್ನು ಪ್ರತ್ಯೇಕವಾಗಿ ಕಟ್ಟಿಕೊಡುತ್ತವೆ.

ಕನ್ನಡದಲ್ಲಿ ಪ್ರಕಟವಾಗಿರುವ ಈ ಪುಸ್ತಕವನ್ನು ಶ್ರೀಮತಿ ಪೂರ್ಣಿಮಾ ಕುಂತೂರು ಆಂಗ್ಲ ಭಾಷೆಗೆ ಸೊಗಸಾಗಿ ಅನುವಾದಿಸಿದ್ದಾರೆ. ಮೂಲ ಪುಸ್ತಕದ ಆಶಯಗಳಿಗೆ ಚ್ಯುತಿ ಬರದಂತೆ ಸರಳವಾದ ಅನುವಾದವು ಓದಿಸಿಕೊಂಡು ಹೋಗುತ್ತದೆ. ಕನ್ನಡ ಆವೃತ್ತಿಯನ್ನು ಭಾರತೀ ಪ್ರಕಾಶನದವರು ಪ್ರಕಟಿಸಿದ್ದು, ಇಂಗ್ಲಿಶ್ ಆವೃತ್ತಿಯು ಅನಂತಕುಮಾರ್ ಪ್ರತಿಷ್ಠಾನದಿಂದಲೇ ಪ್ರಕಾಶನಗೊಂಡಿದೆ.

ಅನಂತಕುಮಾರರು ಬದುಕಿದ್ದರೆ ತಮ್ಮ ಆತ್ಮಚರಿತ್ರೆಯನ್ನು ಬರೆಯುತ್ತಿದ್ದರೇ? ನನಗೆ ಅನುಮಾನವಿದೆ. ಕರ್ಮಯೋಗಿಗೆ ತನ್ನ ಬಗ್ಗೆ ಬರೆದುಕೊಳ್ಳುವಷ್ಟು ಪುರಸೊತ್ತಾದರೂ ದೊರೆತೀತೆ? ಈ ದೃಷ್ಟಿಯಲ್ಲಿ ಅನಂತಕುಮಾರರ ಜೀವನದ ಯಶೋಗಾಥೆಯ ಪರಿಚಯವನ್ನು ದಾಖಲಿಸುವ ಮೂಲಕ ಶ್ರೀ ಟಿ ಎಸ್ ಗೋಪಾಲರು ಅವರ ಅಭಿಮಾನಿಗಳಿಗೆ, ಸ್ನೇಹಿತರಿಗೆ ಮತ್ತು ಸಾರ್ವಜನಿಕರಿಗೆ ಉಪಕಾರ ಮಾಡಿದ್ದಾರೆ. ಕನ್ನಡನಾಡು ಕಂಡ ಕುಶಲ, ಯಶಸ್ವೀ ರಾಜಕಾರಣಿಗಳಲ್ಲೊಬ್ಬರಾದ ಅನಂತಕುಮಾರರ ಜೀವನಚರಿತ್ರೆಯು ಪೂರ್ಣಪ್ರಮಾಣದಲ್ಲಿ ಲಿಖಿತವಾಗಲಿ ಎನ್ನುವ ಆಶಯ ಅಭಿಮಾನಿಗಳೆಲ್ಲರದು.

ಅನಂತಚೇತನ ಕನ್ನಡ ಮತ್ತು ಇಂಗ್ಲಿಶ್ ಪುಸ್ತಕಗಳ ಪ್ರತಿಗಳಿಗಾಗಿ ಸಂಪರ್ಕಿಸಿ:

ಅನಂತಕುಮಾರ್ ಪ್ರತಿಷ್ಠಾನ ದೂರವಾಣಿ ಸಂಖ್ಯೆ **8884182415**

ಭಾರತೀ ಪ್ರಕಾಶನ, ಮೈಸೂರು **9448413188**

ಅಲ್ಲದೆ, www.navakarnatakaonline.com ಸಂಪರ್ಕಿಸಿ ಆನ್ ಲೈನ್ ಮೂಲಕವೂ ಪುಸ್ತಕವನ್ನು ಖರೀದಿಸಬಹುದು.

## ಅನಂತಪಥ

Editor: **Gopal T.S** | Assistance: **K . Janardhana Thunga** | Layout: **Abhishek Gubbi Creatives**

Inputs: **Diwakar Hegde | Pradeep Oak | Poornaprajna | H R Prakash | A G Laxminarayan | Mohan Raj | Sreelakshmi Vishwanath | Vilas Kulakarni**

Sketches: **Raghupathi Sringeri** | Photographs: **Ananthkumar Pratishthana | Poornaprajna | Gopal TS | Adamya Chethana | Google**

Acknowledgements: **Ramachandra Gowda | H N A Prasad | Sapthagiri Gowda | All India Mysore | Pramod Jois | Adamya Chethana**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು; ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

# ಕೋವಿಡ್ ಎರಡನೇ ಅಲೆಯ ನಡುವೆ ಅದಮ್ಯ ಚೇತನದ ಸಹಾಯಹಸ್ತ

ಅದಮ್ಯ ಚೇತನ ಸಂಸ್ಥೆಯು ಕಳೆದ ೨೪ ವರ್ಷಗಳಿಂದ ಅನ್ನ-ಅಕ್ಷರ-ಆರೋಗ್ಯ ಕ್ಷೇತ್ರಗಳಲ್ಲಿ ಅನೇಕ ಸಾಮಾಜಿಕ ಉಪಯುಕ್ತ ಸೇವಾಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಶಾಲಾವಧಿಯಲ್ಲಿ ಪ್ರತಿದಿನ ಲಕ್ಷಾಂತರ ಮಕ್ಕಳಿಗೆ ಬಿಸಿಯೂಟ ಒದಗಿಸುವ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುವುದಲ್ಲದೆ, ಯಾವುದೇ ಬಗೆಯ ಸಾಮಾಜಿಕ ಕಷ್ಟ, ಪ್ರಕೃತಿ ವಿಕೋಪ ಮತ್ತಿತರ ಸಂಕಷ್ಟಗಳು ಎದುರಾದ ಕ್ಲಿಷ್ಟಸಂದರ್ಭಗಳಲ್ಲಿ ಅದಮ್ಯ ಚೇತನ ಸಂಸ್ಥೆ ಮುಂಚೂಣಿಯಲ್ಲಿದ್ದು ಸಹಾಯ ಹಸ್ತ ನೀಡುತ್ತಿರುವುದು ಎಲ್ಲರಿಗೂ ತಿಳಿದಿದೆ.

ಕಳೆದ ವರುಷ ಕೋವಿಡ್ ಮೊದಲನೇ ಅಲೆಯೆದ್ದ ವಿಷಮಸಮಯದಲ್ಲಿ ವಿಧಿಸಲಾದ ಲಾಕ್ಡೌನ್ ಕಾಲದಲ್ಲೂ ೭ಲಕ್ಷ ಜನರಿಗೆ ಊಟ ಮತ್ತು ೨೮,೦೦೦ ಜನರಿಗೆ "ರೇಷನ್ ಕಿಟ್" ಗಳ ಜೊತೆಗೆ ಸಂಸ್ಥೆಯೇ ತಯಾರಿಸಿದ ರೆಡಿ "ಉಪ್ಪಿಟ್ಟು ಮಿಕ್ಸ್" ವಿತರಿಸಿದ ಹೆಗ್ಗಳಿಕೆ ಅದಮ್ಯ ಚೇತನದ್ದು.

ಈ ಕೊರೋನ ಕಾರಣದಿಂದ ಬಹಳಷ್ಟು ಜನ ಕೆಲಸ ಕಳೆದು ಕೊಂಡಿದ್ದು, ಒಂದು ಹೊತ್ತಿನ ಊಟಕ್ಕೂ ಪರದಾಡುವಂತಹ ಪರಿಸ್ಥಿತಿ ಒದಗಿದ್ದಿತು. ಅಂಥವರಿಗೆ ಮಧ್ಯಾಹ್ನದ ಒಂದು ಹೊತ್ತಿನ ಊಟವಾದರೂ ಸಿಗಲಿ ಎಂಬ ಉದ್ದೇಶದಿಂದ 'ನಿತ್ಯ ಅನ್ನದಾನ' ಕಾರ್ಯಕ್ರಮವನ್ನು ಅದಮ್ಯಚೇತನ ಪ್ರಾರಂಭಿಸಿತು. ಗವಿಪುರದ ಅದಮ್ಯಚೇತನ ಸಂಸ್ಥೆಯ ಕಟ್ಟಡದ ಪಕ್ಕದ ಕಟ್ಟೆಯಲ್ಲಿ ಶುರುವಾದ ಈ ಕಾರ್ಯಕ್ರಮ ಈಗ ಬೆಂಗಳೂರಿನ ವಿವಿಧೆಡೆ ೫ ಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ.

ಇದೀಗ ಕೋವಿಡ್ ೨ನೇ ಅಲೆಯ ವಿಷಮ ಪರಿಸ್ಥಿತಿ ಎದುರಾಗಿದೆ. ಈ ಕಠಿಣ ಸ್ಥಿತಿಯಲ್ಲಿಯೂ ಅದಮ್ಯ ಚೇತನ ಸಂಸ್ಥೆ ತನ್ನ ಸಾಮಾಜಿಕ ಕರ್ತವ್ಯವನ್ನು ನಿಭಾಯಿಸುತ್ತಿದೆ.

ಕೋವಿಡ್ ಮೊದಲನೆ ಅಲೆಗಿಂತ ಈಗಿನ ಎರಡನೆ ಅಲೆ ವಿಭಿನ್ನವೂ ಗಂಭೀರವೂ ಆದ ಸವಾಲುಗಳನ್ನು ಒಡ್ಡುತ್ತಿದೆ. ಅದಮ್ಯ ಚೇತನದ ಅಡುಗೆ ಸಿಬ್ಬಂದಿಯವರೆಲ್ಲರೂ ಅದಮ್ಯ ಚೇತನದಲ್ಲಿಯೇ ಇರುವುದರಿಂದ, ಮೊದಲು ಅವರಿಗೆಲ್ಲ ಕೋವಿಡ್ ಟೆಸ್ಟ್ ಮಾಡಿಸಿ ನೆಗೆಟೀವ್ ರಿಪೋರ್ಟ್ ಬಂದ ಸಿಬ್ಬಂದಿಯವರನ್ನು ಸಂಸ್ಥೆಯ ವಸತಿ ನಿಲಯದಲ್ಲಿಯೇ ಇರುವಂತೆ ವ್ಯವಸ್ಥೆ ಮಾಡಲಾಗಿದೆ. ಹತ್ತಿರದಲ್ಲೇ ತಮ್ಮ ಮನೆಯಿದ್ದರೂ ಸಿಬ್ಬಂದಿಯವರಿಗೆ ಮನೆಗೆ ಹೋಗದಂತೆ ವಿಧಿಸಿ ಅದಮ್ಯ ಚೇತನ ವಸತಿ ನಿಲಯದಲ್ಲಿಯೇ ಉಳಿದು ಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಇನ್ನುಳಿದ ಕಾರ್ಯಕರ್ತರು ಹೊರಗಿನಿಂದಲೇ ಕೆಲಸ ನಿರ್ವಹಿಸಿ ತಮ್ಮ ತಮ್ಮ ಮನೆಗಳಿಗೆ ಹೋಗಬೇಕು ಎಂದು ಕಟ್ಟುಪಾಡು ಮಾಡಲಾಗಿದೆ. ಅಂದರೆ ಒಳಗಿನಿಂದ ಹೊರಗಡೆ ಹೋಗುವಂತಿಲ್ಲ, ಹೊರಗಿನವರು ಒಳಗೆ ಬರುವಂತಿಲ್ಲ. ಅಂತಹ ಧೃಢವಾದ 'ಮಾರ್ಗಸೂಚಿ' ಯನ್ನು ಪಾಲನೆ ಮಾಡಲಾಗುತ್ತಿದೆ.

ಮನೆಯಿಂದಲೇ ಕೆಲಸ ನಿರ್ವಹಿಸುತ್ತಿರುವ (ವರ್ಕ್ ಫ್ರಮ್ ಹೋಮ್ ಸ್ಟಾಫ್) ಸಿಬ್ಬಂದಿಯವರು ಈ ಬೃಹತ್ ಅಡುಗೆಗೆ ಬೇಕಾದ ಸಾಮಾನುಗಳನ್ನು ಮನೆಯಿಂದಲೇ ಆರ್ಡರ್ ಮಾಡಿ, ಅದಮ್ಯ ಚೇತನದ ಗೇಟಿನವರೆಗೆ, ಸ್ಟೋರಿನಲ್ಲಿ ತರಿಸುವಂತಹ ವ್ಯವಸ್ಥೆ ಮಾಡುತ್ತಾರೆ. ಅವನ್ನೆಲ್ಲ ಅಲ್ಲಿಯ ಸಿಬ್ಬಂದಿಯವರು ಸ್ಯಾನಿಟೈಸ್ ಮಾಡಿ ಸ್ಟೋರ್ನಲ್ಲಿ ಜೋಡಿಸಿಕೊಳ್ಳುತ್ತಾರೆ. ಇದೇ ರೀತಿ ಪ್ರತಿಯೊಂದು ವಸ್ತುವನ್ನೂ, ಪ್ರತಿಯೊಂದು ಕೆಲಸವನ್ನೂ ನಿಗಾವಹಿಸಿ ಅಚ್ಚುಕಟ್ಟಾಗಿ ಕೊರೋನ ಮಾರ್ಗಸೂಚಿಯಂತೆ ನಡೆಸಲಾಗುತ್ತಿದೆ.

ಇನ್ನು ಅಡುಗೆ ವಿಚಾರ. "ನಿತ್ಯ ಅನ್ನದಾನ"ವಿರಲಿ, ಕೋವಿಡ್ ಕಾರ್ಯಕರ್ತರಿಗೆ ಹಂಚಲಾಗುವ ಆಹಾರವಾಗಲಿ, ಪ್ರತಿಯೊಬ್ಬರ ಊಟವನ್ನು ಸಹ ಚಿಕ್ಕ ಚಿಕ್ಕ ಡಬ್ಬಿಗಳಲ್ಲಿಹಾಕಿ ಪ್ಯಾಕ್ ಮಾಡಿ ಕಳುಹಿಸಲಾಗುತ್ತಿದೆ. ಪ್ರತಿ ಡಬ್ಬಿಯಲ್ಲಿ ಒಬ್ಬರಿಗೆ ಹೊಟ್ಟೆ ತುಂಬುವಷ್ಟು ಊಟವನ್ನು ತುಂಬಿಸಿಡಲಾಗುತ್ತಿದೆ. ಊಟವನ್ನು ಆಯಾ ಕೇಂದ್ರಗಳಿಗೆ ಕೊಂಡೊಯ್ಯುವ ವಾಹನಗಳಿಗೂ ಸ್ಯಾನಿಟೈಸ್ ಮಾಡಿ, ಶುಚಿತ್ವದ ಕಡೆ ಗಮನ ಕೊಡಲಾಗುತ್ತಿದೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಸಂಸ್ಥೆಯ ಅಧ್ಯಕ್ಷರಾದ ಡಾ.ತೇಜಸ್ವಿನಿ ಅನಂತಕುಮಾರ್ ಅವರು ವೀಡಿಯೋ ಕಾಲ್ ಮೂಲಕ ವೀಕ್ಷಿಸಿ ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸುತ್ತಾರೆ. ಹಾಗೆಯೇ ಅಡುಗೆ ಸಿಬ್ಬಂದಿ ವರ್ಗದವರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ವಾರದಲ್ಲಿ ಎರಡು ದಿನ ಮೀಟಿಂಗ್ ಕರೆದು, ಆವರೆಗೆ ನಿರ್ವಹಿಸಿದ ಕೆಲಸದ ಬಗ್ಗೆ ಅವಲೋಕನ ಮಾಡುವುದಲ್ಲದೆ, ಮುಂದಿನ ಕೆಲಸದ ಬಗ್ಗೆ ತಿಳುವಳಿಕೆ ನೀಡಲಾಗುವುದು.

ಮುಖ್ಯವಾಗಿ, ಆಹಾರವನ್ನು ನಗರದ ವಿವಿಧೆಡೆಗಳಿಗೆ ಒಯ್ಯುವ ಎಲ್ಲಾ ವಾಹನ ಚಾಲಕರಿಗೂ ಲೋಡರುಗಳಿಗೂ ಸಹ ಪ್ರತ್ಯೇಕ ವಸತಿ ವ್ಯವಸ್ಥೆ ಮಾಡಲಾಗಿದೆ. ವಾಹನಗಳ ಸಿಬ್ಬಂದಿ ತಮ್ಮ ತಮ್ಮ ಮನೆಗಳಿಗೆ ಹೋಗುವಂತಿಲ್ಲ; ಅವರು ನಾವು ಕಲ್ಪಿಸಿಕೊಟ್ಟ ವಸತಿಯಲ್ಲಿಯೇ ಉಳಿದುಕೊಂಡು ಕೆಲಸ ನಿರ್ವಹಿಸುತ್ತಿದ್ದಾರೆ. ಈ ದೃಷ್ಟಿಯಿಂದಲೂ ಸುರಕ್ಷತೆಯನ್ನು ಪಾಲಿಸಲಾಗುತ್ತಿದೆ.

ಈಗ ಪ್ರತಿದಿನ ಊಟವನ್ನು ನಿತ್ಯ ಅನ್ನದಾನದ ಕೇಂದ್ರಗಳಿಗೆ ಕಳುಹಿಸಲಾಗುತ್ತಿದೆ. ಅಲ್ಲದೆ, ಜನಸೇವೆಯಲ್ಲಿ ತತ್ಪರರಾದ ಆಸ್ಪತ್ರೆಗಳ ಸಿಬ್ಬಂದಿಗೆ, ಲಸಿಕಾ ಕೇಂದ್ರಗಳಲ್ಲಿನ ಸಿಬ್ಬಂದಿಯವರಿಗೆ, ಕೋವಿಡ್ ಯೋಧರಿಗೆ ವಿತರಿಸಲಾಗುತ್ತಿದೆ. ವಿವಿಧ ಆಸ್ಪತ್ರೆಗಳಲ್ಲಿನ ರೋಗಿಗಳ ಸಹಾಯಕರಿಗೆ, ಸೇವಾ ಬಸ್ತಿಗಳಲ್ಲಿರುವ ಹಸಿದವರಿಗೂ ಊಟವನ್ನು ಕೊಡಲಾಗುತ್ತಿದೆ. ಈ ಎಲ್ಲಾ ಊಟದ ಖರ್ಚನ್ನು ನಿಭಾಯಿಸಲು ದಾನಿಗಳಿಂದ ಕೊಡುಗೆಯನ್ನು ಸ್ವೀಕರಿಸಲಾಗುತ್ತಿದೆ. ಆದರೆ, ದಾನಿಗಳ ಹಣವನ್ನು ಕೇವಲ ದಿನಸಿ ಖರ್ಚಿಗೆ ವಿನಿಯೋಗಿಸಲಾಗುತ್ತಿದೆ. ಇನ್ನು ಆಹಾರ ತಯಾರಿಕೆ, ಇಂಧನ, ವಿದ್ಯುತ್, ಸಿಬ್ಬಂದಿ ವರ್ಗದವರ ಸಂಬಳ ಇತ್ಯಾದಿ ವೆಚ್ಚಗಳನ್ನು ಸಂಸ್ಥೆಯೇ ಭರಿಸುತ್ತಿದೆ.

ಈ ಎಲ್ಲಾ ಯೋಜನೆಗಳು ಯಶಸ್ವಿಯಾಗಿ ನಡೆಯಲು ದಾನಿಗಳ ಮತ್ತು ನಿಮ್ಮೆಲ್ಲರ ಸಹಕಾರ ಮುಖ್ಯವಾಗಿದೆ. ನೀವೆಲ್ಲರೂ ನಮ್ಮೊಡನೆ ಸದಾ ಇರುತ್ತೀರಿ ಎಂದು ಹಾರೈಸುತ್ತೇವೆ.

**- ಶ್ರೀಲಕ್ಷ್ಮೀ ವಿಶ್ವನಾಥ್**

## ಕೋವಿಡ್ ಸಮಯದಲ್ಲಿ 'ಅನ್ನದಾನ'

ಕೋವಿಡ್ ನ ೨ನೇ ಅಲೆಯು ನಮ್ಮ ರಾಜ್ಯಕ್ಕೂ ರಭಸದಿಂದಲೇ ಅಪ್ಪಳಿಸಿದೆ. ಬೆಂಗಳೂರಿನ ಮನೆಮನೆಯಲ್ಲಿಯೂ ಅದರ ಕರಾಳ ಛಾಯೆಯು ಕಾಣುತ್ತಿದೆ. ಈ ಮಹಾಮಾರಿಯನ್ನು ನಿಯಂತ್ರಿಸಲು, ವೈದ್ಯಕೀಯ ಸಿಬ್ಬಂದಿ, ಪೋಲೀಸು, ಸರಕಾರ ಮತ್ತಿತರ ಕೋವಿಡ್ ಯೋಧರು ಹಗಲಿರುಳೆನ್ನದೆ ಮತ್ತೆ ಕಾರ್ಯತತ್ಪರರಾಗಿದ್ದಾರೆ.

ಇಂತಹ ಸಂಕಷ್ಟದ ಸಮಯದಲ್ಲಿ ಅದಮ್ಯ ಚೇತನವು ಎಂದಿನಂತೆ ತನ್ನ ಸಾಮಾಜಿಕ ಕರ್ತವ್ಯವನ್ನು ನಿಭಾಯಿಸಲು ಕಟಿಬದ್ಧವಾಗಿ ನಿಂತಿದೆ. ಕಳೆದ ವರ್ಷದ ಕೋವಿಡ್ ಅಲೆ ಯಲ್ಲಿ ೭ ಲಕ್ಷಕ್ಕೂ ಅಧಿಕ ಊಟವನ್ನು ಬಡಿಸಿದ ಅದಮ್ಯ ಚೇತನದ 'ಅನ್ನಪೂರ್ಣಾ' ಅಡುಗೆಮನೆಯು ಕಳೆದ ಎಪ್ರಿಲ್ ೨೯ರಿಂದ ಮತ್ತೆ ಪ್ರತಿದಿನವೂ ೫೦೦೦ ಜನರಿಗೆ ಊಟವನ್ನು ತಯಾರಿಸಿ ವಿತರಿಸುತ್ತಿದೆ. ಬೆಂಗಳೂರಿನ ೨೫ಕ್ಕೂ ಹೆಚ್ಚು ಆಸ್ಪತ್ರೆಗಳಿಗೆ, ಅನೇಕ ಪೋಲೀಸ್ ಠಾಣೆಗಳಿಗೆ, ಮನಪಾ ಕಾರ್ಯಾಲಯಗಳಿಗೆ, ಸಂಕಷ್ಟಕಾಲದಲ್ಲಿ ಸೇವಾತತ್ಪರರಾದ ಮುಂಚೂಣಿ ಕಾರ್ಯಕರ್ತರಿಗೆ ಬಿಸಿಯಾದ ರುಚಿಯಾದ ಊಟವನ್ನು ಎರಡೂ ಹೊತ್ತು ತಲುಪಿಸುತ್ತಿದೆ.

ಯೂಥ್ ಫಾರ್ ಸೇವಾ ಮತ್ತು ರಾ. ಸ್ವ. ಸಂ. ದ ಸಹಯೋಗದೊಂದಿಗೆ ಈ ಕಾರ್ಯವು ಸುಸೂತ್ರವಾಗಿ ಸಾಗಿದೆ. ಎಂದಿನಂತೆ, ಅದಮ್ಯ ಚೇತನದ ನೂರಾರು ದಾನಿಗಳು ಮತ್ತು ಕಾರ್ಯಕರ್ತರು ಈ ಮಹತ್ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಎಲ್ಲರಿಗೂ ಧನ್ಯವಾದಗಳು.

**- ಪ್ರದೀಪ್ ಓಕ್**
**ನಿರ್ದೇಶಕರು, ಅದಮ್ಯಚೇತನ**

## ಕೃತಜ್ಞತೆ


ಲಾಕ್ಡೌನ್ ಪರಿಣಾಮವಾಗಿ ನಮ್ಮ ಆಸ್ಪತ್ರೆ ಸಿಬ್ಬಂದಿಗೆಲ್ಲ ತುಂಬಾ ತೊಂದರೆಯಾಗಿತ್ತು. ಮೊದಲನೆಯದಾಗಿ ಬಸ್ಸುಗಳು, ಟ್ಯಾಕ್ಸಿಗಳು, ಆಟೋಗಳು ಯಾವುದೂ ಇಲ್ಲ. ಅವರು ಹಾಸ್ಪಿಟಲಿಗೆ ಬರಬೇಕು ಅಂದರೆ ಬೆಳಗಿನ ಜಾವದಲ್ಲೇ ಎದ್ದು ಬರಬೇಕು. ತುಂಬ ಕಷ್ಟಪಟ್ಟು ಬರುತ್ತ ಇದ್ದರು. ಬೆಳಗಿನ ತಿಂಡಿ ಮಾಡುತ್ತಿರಲಿಲ್ಲ, ಹಾಗೇ ಬರುತ್ತ ಇದ್ದರು. ಇಲ್ಲೂ ಊಟ ಮಾಡೋಣವೆಂದರೆ ಕ್ಯಾಂಟೀನ್ ಇರಲಿಲ್ಲ. ಅಂತಹ ಸಮಯದಲ್ಲಿ ನನಗೆ ಒಂದು ಸಂದೇಶ ಬಂದಿತು. ಇದು ಬಂದಿದ್ದು "ಯೂಥ್ ಫಾರ್ ಸೇವಾ ಮತ್ತು ಅದಮ್ಯ ಚೇತನ"ದಿಂದ. ನಿಮ್ಮ ಸ್ಟಾಫ್, ಪೇಷಂಟ್ ಅಥವಾ ಅಟೆಂಡರ್ಸ್ ಯಾರಿಗಾದರೂ ರಾತ್ರಿ ಊಟ, ಮಧ್ಯಾಹ್ನದ ಊಟದ ಅವಶ್ಯಕತೆ ಇದ್ದರೆ ಹೇಳಿ . ನಾವು ನಿಮಗೆ ಉಚಿತವಾಗಿ ತಲುಪಿಸುತ್ತೀವಿ ಅಂತ ಹೇಳಿದರು.

ನಮಗೆ ತುಂಬ ಸಂತೋಷವಾಯಿತು. ಹಾಗೆಯೇ ದಿನನಿತ್ಯ ಊಟ ತಂದು ಕೊಡುತ್ತ ಇದ್ದಾರೆ. ಊಟಾನೂ ತುಂಬಾ ಶುಚಿರುಚಿಯಾಗಿ ಬಿಸಿ ಬಿಸಿಯಾಗಿ ಇರುತ್ತೆ . ಈಗ ನಮ್ಮ ಸ್ಟಾಫ್ ಗಳಿಗೆಲ್ಲ ಆಗಿರುವ ದೊಡ್ಡ ಅನುಕೂಲ ಅಂದರೆ ಅವರು ಮನೆಯಿಂದ ಬರಬೇಕಾದರೆ ಯೋಚನೆ ಮಾಡಬೇಕಾಗಿಲ್ಲ. ಊಟಕ್ಕೆ ಏನು ಮಾಡುವುದೆಂಬ ಯೋಚನೆಯಿಂದ ದೂರವಾಗಿ ನಿಶ್ಚಿಂತೆಯಿಂದ ಕೆಲಸ ಮಾಡಬಹುದು. ರಾತ್ರಿ ಮನೆಗೆ ಹೋಗಬೇಕಾದಾಗ ತಡವಾಗಿದ್ದರೆ ಆಗಲೂ ಒಂದು ಬಾಕ್ಸ್ ಊಟ ಮನೆಗೆ ತೆಗೆದುಕೊಂಡು ಹೋಗಬಹುದು. ಈ ಅನುಕೂಲ ಮಾಡಿಕೊಟ್ಟ ಯೂಥ್ ಫಾರ್ ಸೇವಾ ಮತ್ತು ಅದಮ್ಯ ಚೇತನದವರಿಗೆ ನಮ್ಮ ಮಲ್ಯ ಆಸ್ಪತ್ರೆಯ ಎಲ್ಲಾ ಸಿಬ್ಬಂದಿಯ ಪರವಾಗಿ ಅನಂತಾನಂತ ಧನ್ಯವಾದಗಳು. ದೇವರು ಅವರ ಸಂಸ್ಥೆಯನ್ನು ಆಶೀರ್ವದಿಸಿ ಇನ್ನೂ ಹೆಚ್ಚಿನ ಸೇವೆ ಮಾಡುವ ಅವಕಾಶ ಕಲ್ಪಿಸಿ ಕೊಡಲಿ. ಧನ್ಯವಾದಗಳು.

**- ಮಲ್ಲಿಕಾರ್ಜುನ**
**ಅಡ್ಮಿನಿಸ್ಟ್ರೇಟರ್, ಮಲ್ಯ ಆಸ್ಪತ್ರೆ, ಬೆಂಗಳೂರು.**

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ಯೂತ್ ಫಾರ್ ಸೇವಾ ಸಹಯೋಗದಲ್ಲಿ ಕಳೆದ 15 ದಿನಗಳಿಂದ ಪ್ರತಿದಿನ 5000 ಜನರಿಗೆ ಊಟವನ್ನು ವಿತರಿಸಲಾಗುತ್ತಿದೆ.






ಸಸ್ಯಾಗ್ರಹದ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮ ಇಟ್ಟಮಡುವಿನಲ್ಲಿ ನಡೆದ 281ನೇ ಹಸಿರು ಭಾನುವಾರದವರೆಗೆ ನಿರಂತರವಾಗಿ ನಡೆಯುತ್ತಿದೆ.



ಅದಮ್ಯಚೇತನದ ಸ್ವಯಂಸೇವಾ ಕಾರ್ಯಕರ್ತರು ಮತ್ತು ಸಿಬ್ಬಂದಿಗೆ ಕೋವಿಡ್ ಕಾಲದ ಸೂಕ್ತ ಮಾರ್ಗದರ್ಶನಕ್ಕಾಗಿ ಸಭೆ



ಕೋವಿಡ್ ಸಂಕಷ್ಟ ಕಾಲದಲ್ಲಿ ಶ್ರಮಿಸುತ್ತಿರುವ ಅದಮ್ಯ ಚೇತನದ ಯೋಧರಿಗೆ ಕರ್ನಾಟಕ ಆಯುರ್ವೇದಿಕ್ ಕಾಲೇಜಿನ ವತಿಯಿಂದ ಕೋವಿಡ್ ಪ್ರತಿರೋಧ ಕಿಟ್ ಗಳನ್ನು ವಿತರಿಸಿದ ಸಂದರ್ಭ. ಕಾಲೇಜಿನ ಪ್ರಾಂಶುಪಾಲರಾದ ಡಾ.ಅಹಲ್ಯ, ಡಾ.ರಮೇಶ್ ಮೊದಲಾದವರು ಉಪಸ್ಥಿತರಿದ್ದರು.




ಇಂಗ್ಲೆಂಡಿನ ಸಿರಿಬ್ಲೂಮ್ ಸಂಸ್ಥೆ ಆಯೋಜಿಸಿದ್ದ ಮೆಟಾಕಾಗ್ನಿಷನ್ ಇನ್ ಎಜುಕೇಷನ್ ಕಾರ್ಯಕ್ರಮದ ಉದ್ಘಾಟನೆ ಸಂದರ್ಭ, ಶ್ರೀಮತಿ ಸುಧಾ ಮೂರ್ತಿ ಮತ್ತು ಡಾ. ಪ್ರಾಚೀ ಜಾವಡೇಕರ್ ಅವರೊಡನೆ.



ಕೋವಿಡ್ ಸಂಕಷ್ಟ ಕಾಲದಲ್ಲಿ ಪ್ರತಿದಿನ ಅದಮ್ಯ ಚೇತನದ ಪಾಕಶಾಲೆಯಲ್ಲಿ 70000ಕ್ಕೂ ಹೆಚ್ಚು ಜನರಿಗಾಗಿ ಆಹಾರವನ್ನು ತಯಾರಿಸಲಾಗುತ್ತಿದೆ.

## ಅನಂತ ಚಿತ್ರಸಂಪುಟ

( ಮೇ ತಿಂಗಳ ನೆನಪಿನ ಹಲವು ಚಿತ್ರಗಳು )

ಸಂಕಲನ: ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ಏಪ್ರಿಲ್ ೧೯೯೮ ರಲ್ಲಿ ಶ್ರೀ ಅನಂತಕುಮಾರ್ ಮೊದಲ ಬಾರಿಗೆ ಕೇಂದ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಸಮಾರಂಭದ ಚಿತ್ರ



ಮೇ ೨೦೧೮ ರಲ್ಲಿ ಪ್ರಧಾನಿ ಮೋದಿಯವರು ಕರ್ನಾಟಕ ವಿಧಾನಸಭಾ ಚುಣಾವಣೆಯ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಸಂದರ್ಭದ ಚಿತ್ರ



ಬೆಂಗಳೂರಿನಲ್ಲಿ ನಡೆದ ಬಸವ ಜಯಂತಿ ಸಮಾರಂಭದಲ್ಲಿ ಶ್ರೀ ಶ್ರೀ ರವಿಶಂಕರ್ ಗುರೂಜಿ, ಪೂಜ್ಯ ಸಿದ್ಧಗಂಗಾ ಮಠಾಧೀಶರು, ನ್ಯಾ. ಎಂ.ಎನ್. ವೆಂಕಟಾಚಲಯ್ಯ, ಡಾ. ಸೋಮಶೇಖರ್ ಮೊದಲಾದವರೊಡನೆ




ದೆಹಲಿಯ ಇಂಡಿಯಾ ಗೇಟ್ ಮುಂಭಾಗದಲ್ಲಿ (೨೦೧೬ ಮೇ ತಿಂಗಳು) ಶಂಕರಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಅನಂತಕುಮಾರ್ ಭಾಗವಹಿಸಿದ್ದರು.




ಹರ್ಯಾಣ ರಾಜ್ಯದಲ್ಲಿ ಸಿಪೆಟ್ ಪ್ರಾರಂಭೋತ್ಸವದಲ್ಲಿ ಅಲ್ಲಿನ ಮುಖ್ಯಮಂತ್ರಿ ಶ್ರೀ ಖಟ್ಟರ್ ಅವರೊಡನೆ ಶ್ರೀ ಅನಂತಕುಮಾರ್



ಹುಬ್ಬಳ್ಳಿಯ ಅದಮ್ಯ ಚೇತನ ಕೇಂದ್ರದಲ್ಲಿ ಪ್ಲೇಟ್ ಬ್ಯಾಂಕ್ ಉದ್ಘಾಟನೆ ( ಮೇ ೨೦೧೫ ರಲ್ಲಿ)